

# ಯುಗ ಪ್ರವರ್ತಕ
# ಶ್ರೀ ಜೀವೋತ್ತಮ ತೀರ್ಥರು





'ಶ್ರೀ'ಗಳವರ ಆರಾಧ್ಯ ದೇವರು ಶ್ರೀ ವೀರವಿಟ್ಠಲ



ಶ್ರೀ ಭೂವಿಜಯ ವಿಟ್ಠಲ ದೇವರು ( ಗೋಕರ್ಣ )



ಶ್ರೀ ದಿಗ್ವಿಜಯ ವಿಟ್ಠಲ ದೇವರು ( ಬಸರೂರು )

# ಯುಗ ಪ್ರವರ್ತಕ

# ಶ್ರೀ ಜೀವೋತ್ತಮ ತೀರ್ಥರು

ಲೇಖಕರು
ಚಂದ್ರಕಾಂತ ಕೇಣಿ

ಅನುವಾದಕರು
ಶಾ. ಮಂ. ಕೃಷ್ಣರಾಯ

ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠ

# ಯುಗ ಪ್ರವರ್ತಕ ಶ್ರೀ ಜೀವೋತ್ತಮ ತೀರ್ಥರು

ಸಪ್ಟೆಂಬರ 1999

ಲೇಖಕರು : ಮರಾಠಿ ಮೂಲ

**ಚಂದ್ರಕಾಂತ ಕೇಣಿ**

ಅನುವಾದಕರು : ಕನ್ನಡಕ್ಕೆ

**ಶಾ. ಮಂ. ಕೃಷ್ಣರಾಯ**

©

ಎಲ್ಲ ಹಕ್ಕುಗಳು ಪ್ರಕಾಶಕರ ಅಧೀನ

ಅಕ್ಷರ ಜೋಡಣೆ ಮತ್ತು ಮುದ್ರಣ :

ಶಿವಾ ಆಫ್‌ಸೆಟ್ ಪ್ರಿಂಟರ್ಸ್

ಸಿ. ಪಿ. ಬಝಾರ್, ಶಿರಸಿ (ಉ. ಕ.)

ದೂರವಾಣಿ : 26455, 27563

**ಪ್ರಕಾಶಕ :**

**ವಾಸುದೇವ ವಸಂತರಾವ ಶೇಣವಿ ಧೇಂಪೆ**

ಅಧ್ಯಕ್ಷರು, ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠ ಸಮಿತಿ

ಪರ್ತಗ

**ಬೆಲೆ : 20/-**

**ಪ್ರತಿಗಳು : 1000**

# ವಿಷಯಾನುಕ್ರಮ


| | ಪುಟ ಸಂಖ್ಯೆ |
|---|---|
| ಮೊದಲ ಮಾತು ................................ | 4 |
| ಶ್ರೀ ಗುರುಸ್ಮರಣ ........................................ | 7-22 |
| ವೈಷ್ಣವ ಸಂಪ್ರದಾಯದ ಜೀವೋತ್ತಮ ಮಠ ........... | 23-32 |
| ಬಸರೂರದಲ್ಲಿಯ ವಸಾಹತು ...................... | 32-39 |
| ವಿಟ್ಠಲನ ಮೂರು ಪ್ರತಿಮೆಗಳು ............................ | 39-46 |
| ಶ್ರೀ ಜೀವೋತ್ತಮ ತೀರ್ಥರು ಸಂದರ್ಶಿಸಿದ ತೀರ್ಥಕ್ಷೇತ್ರಗಳ ಯಾದಿ ......... | 46-48 |

# ಮೊದಲ ಮಾತು

ಶ್ರೀ ಸಂಸ್ಥಾನ ಗೋಕರ್ಣ-ಪರ್ತಗಾಳಿ ಜೀವೋತ್ತಮ ಮಠ ಪರಂಪರೆಯಲ್ಲಿಯ ಮೂರನೆಯ ಸ್ವಾಮಿ ಪರಮಪೂಜ್ಯ ಶ್ರೀಮದ್ ಜೀವೋತ್ತಮ ತೀರ್ಥ ಶ್ರೀಪಾದಂಗಳವರ ಜೀವನ ಕಾರ್ಯಗಳ ಕಿರುಪರಿಚಯ ಮಾಡಿಸಿಕೊಡುವ ಈ ಕಿರು ಪುಸ್ತಕವನ್ನು ಪ್ರಸಿದ್ಧಗೊಳಿಸುತ್ತಿರುವಾಗ ನಮಗೆ ಆನಂದವಾಗುತ್ತಿದೆ. ಪರಮ ಪೂಜನೀಯ ಶ್ರೀಮದ್ ಜೀವೋತ್ತಮ ತೀರ್ಥ ಶ್ರೀಪಾದಂಗಳವರ ಸಮಗ್ರ ಕಾಲಕೀರ್ದಿಯು ಅತ್ಯಂತ ಉಜ್ವಲ ವಾಗಿದ್ದು, ಶ್ರೀಮಠದ ವೈಭವದಲ್ಲಿ ಅಮೂಲ್ಯ ಸ್ಥಾನ ಪಡೆದಿದೆ. ವಿಶೇಷವಾಗಿ ಶ್ರೀಪಾದಂಗಳವರು ಆ ಕಾಲದಲ್ಲಿ ಮಾಡಿದ ತೀರ್ಥಯಾತ್ರೆಗಳು ಸರ್ವಜನಾದರ ಹಾಗೂ ಆಶ್ಚರ್ಯದ ವಿಷಯವಾಗಿತ್ತು. ದುರ್ಗಮ, ದುರ್ಲಭವಾದ ಶ್ರೀ ಗಂಡಕೀ ಶಿಲಾಕ್ಷೇತ್ರ ಯಾತ್ರೆಯಿಂದಾಗಿ ಶ್ರೀಪಾದಂಗಳವರ ಕೀರ್ತಿ ಶತಗುಣಿತವಾಗಿತ್ತು.

ಬಸರೂರು ಪರಮಪೂಜ್ಯ ಶ್ರೀಪಾದಂಗಳವರ ಹುಟ್ಟೂರು. ಅಲ್ಲಿ ಮಠ ಸ್ಥಾಪನೆ ಮಾಡಿ ಗಂಡಕಿಯಾತ್ರೆಯಿಂದ ಹಿಂತಿರುಗುವಾಗ ತಮ್ಮೊಡನೆ ತಂದ ಮೂರು ವಿಟ್ಠಲ ಪ್ರತಿಮೆಗಳಲ್ಲಿ ಒಂದಾದ ಶ್ರೀ ದಿಗ್ವಿಜಯ ವಿಟ್ಠಲ ಪ್ರತಿಮೆಯನ್ನು ಈ ಮಠದಲ್ಲಿ ಸ್ಥಾಪಿಸಿದರು. ಸದ್ಯ ಪ್ರಚಲಿತ ಶ್ರೀ ಪ್ರಮಾಥಿನಾಮ ಸಂವತ್ಸರದಲ್ಲಿ (ಶ್ರೀ ಶಕೆ ೧೯೨೧) ಶ್ರೀ ಗಂಡಕೀಯಾತ್ರೆಯ ಯಶಸ್ವೀ ಪರಿಪೂರ್ತಿಯ ನಂತರ ವಿದ್ಯಮಾನ ಮಠಾಧೀಶ ಪರಮಪೂಜ್ಯ ಶ್ರೀಮದ್ ವಿದ್ಯಾಧಿರಾಜ ತೀರ್ಥ ಶ್ರೀಪಾದ ವಡೇರ ಸ್ವಾಮಿಜಿಯವರ ಚಾತುರ್ಮಾಸ್ಯ ವ್ರತಾಚರಣೆಯು ಶ್ರೀ ಬಸ್ರೂರು ಮಠದಲ್ಲಾಗುತ್ತದೆ ಎಂಬುದೊಂದು ಸುಯೋಗವೆಂದು ಹೇಳಬೇಕಾಗುತ್ತದೆ. ಅದರಲ್ಲೂ ಪರಮಪೂಜ್ಯ ಶ್ರೀ ಜೀವೋತ್ತಮ ತೀರ್ಥ ಶ್ರೀಪಾದಂಗಳವರ ಪುಣ್ಯತಿಥಿಯು ಈ ಚಾತುರ್ಮಾಸ್ಯ ವ್ರತ ಕಾಲದಲ್ಲಿ ಆಚರಿಸಲಾಗುತ್ತದೆ ಎಂಬುದು ಒಂದು ವೈಶಿಷ್ಟ್ಯ. ಒಂದು ರೀತಿಯಲ್ಲಿ ಇದೊಂದು ಮಣಿಕಾಂಚನ ಯೋಗವಾಗಿದೆ. ಈ ಸಂದರ್ಭದಲ್ಲಿ ಯುಗಪ್ರವರ್ತಕ ಶ್ರೀ ಜೀವೋತ್ತಮ ತೀರ್ಥ ಪುಸ್ತಕದ ಪ್ರಕಾಶನವಾಗುವುದು ಸರ್ವಥಾ ಉಚಿತ ಸಂಗತಿಯಾಗಿದೆ.

ನಮ್ಮ ಸಮಿತಿಯ ಕಾರ್ಯದರ್ಶಿ ಶ್ರೀಚಂದ್ರಕಾಂತ ಕೇಣಿಯವರು ಶ್ರೀ ಮಠ ಕುಲದೇವತೆಗಳ, ಹಾಗೂ ಧರ್ಮಪೀಠಗಳ ಇತಿಹಾಸವನ್ನು ಚಿಕಿತ್ಸಕ ಬುದ್ಧಿಯಿಂದ ಅಭ್ಯಸಿಸಿ, ಐತಿಹಾಸಿಕ ಕಾಗದ ಪತ್ರಗಳ, ಪುರಾವೆಗಳ ಹಾಗೂ ಮೌಖಿಕ ಐತಿಹಾಸಿಕ ಮಾಹಿತಿಯೊಂದಿಗೆ ಯೋಗ್ಯಹೊಂದಾಣಿಕೆಯಾಗುವಂತಹ ಸಾರಸ್ವತ ಸಮಾಜದ ವಿವಿಧ ಮುಖಗಳನ್ನು ಬೆಳಗಿಸುವ ಗ್ರಂಥಗಳ ರಚನೆ ಮಾಡುತ್ತಲಿದ್ದಾರೆ. ಪ್ರಸ್ತುತ ಪುಸ್ತಿಕೆಯನ್ನು ಅವರೇ ತಯಾರಿಸಿರುತ್ತಾರೆ. ಮಠಾನುಯಾಯಿಗಳು ಇತರ ಭಾವುಕ ಜನತೆಯೂ ಈ ಕೃತಿಯನ್ನು ಮನಃ ಪೂರ್ವಕವಾಗಿ ಸ್ವಾಗತಿಸುವರೆಂಬುದರಲ್ಲಿ ಸಂದೇಹವಿಲ್ಲ. ಇಂತಹ ಪುಸ್ತಕಗಳಿಂದಾಗಿ ಸಾರಸ್ವತ ಸಮಾಜದ ಇತಿಹಾಸ ಹಾಗೂ ನಮ್ಮ ಉದಾತ್ತ ಪರಂಪರೆಯ ಮಾಹಿತಿ ಹೊಸಪೀಳಿಗೆಗೆ ತಿಳುವಳಿಕೆಯುಂಟಾಗಬೇಕೆಂಬ ಅಪೇಕ್ಷೆಯಿಂದ ಬರೆದ ಈ ಪುಸ್ತಕವನ್ನು ಶ್ರೀಗುರುಚರಣದಲ್ಲಿ ಅರ್ಪಿಸುತ್ತಿದ್ದೇನೆ.

ಭಾದ್ರಪದ ಶುಕ್ಲ ಪಂಚಮಿ
ಶ್ರೀ ಶಕೆ ವರ್ಷ 1921

ವಾಸುದೇವ ಮಂತರಾವ್ ಶೇಣವಿ, ಧೆಂಪೆ
ಅಧ್ಯಕ್ಷ
ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠ ಸಮಿತಿ

# ಶ್ರೀ ಗುರು ಸ್ಮರಣ

जीवोत्तमार्केऽभ्युदिते जगत्यां
लयं गतोऽज्ञानतमःसमूहः।
स्वतंन्त्रमेको हरिरस्वतन्त्रं
जीवो जडं चेति वभौ हि तत्त्वम् ॥१॥

ಶ್ರೀ ಜೀವೋತ್ತಮತೀರ್ಥ ಶ್ರೀಪಾದ ವಡೇಯರು ಶ್ರೀ ಗೋಕರ್ಣ ಮಠದ ಮೂರನೇ ಮಠಾಧಿಪತಿಗಳು. ಈ ಪ್ರಕಾರವಾಗಿ ಶ್ರೀಮದ್‌ಜೀವೋತ್ತಮ ತೀರ್ಥ ರೂಪ ಸೂರ್ಯನು ಈ ಲೋಕದಲ್ಲಿ ಪ್ರಕಾಶಮಾನನಾದ ಮೇಲೆ ಅಜ್ಞಾನ-ಜ್ಞಾನಾಭಾವ, ಮಿಥ್ಯಾಜ್ಞಾನ ಮತ್ತು ಸಂಶಯಜ್ಞಾನ-ಈ ಬಗೆಯ ಗಾಢಾಂಧಕಾರವು ನಾಶವಾಯಿತು. ಆದುದರಿಂದಲೇ ಸಚ್ಚಿದಾನಂದಾದ್ಯನಂತ ಗುಣ ಪರಿಪೂರ್ಣ ಸರ್ವೋತ್ತಮನಾದ ಹರಿಯೊಬ್ಬನೇ ಸ್ವತಂತ್ರ, ಮತ್ತು ಜೀವ ಜಡಗಳೆರಡೂ ಅಸ್ವತಂತ್ರರು ಎಂಬ ತತ್ತ್ವವು ತಾನಾಗಿಯೇ ಪ್ರಕಾಶಮಾನವಾಯಿತು. ಅರ್ಥಾತ್ ಯಥಾರ್ಥ ಜ್ಞಾನರೂಪ ಪ್ರಕಾಶದಿಂದ ಈ ಲೋಕ ಬೆಳಗಿತು. ॥೧॥

जीवा अनन्ता जडमप्यनेकं
नित्या ऋता जीवजडेशभेदाः ।
निचोच्चभावोऽस्ति हि जीवसंघे
विष्णोर्वशे तिष्ठति सर्वमेतत् ॥२॥
ईशो रमेशस्ततसद्गुणाब्धिः
सृष्ट्यादिकार्याष्टककारणं सः ।
मुक्तिः परा नैजसुखानुभूति-
स्तत्कारणं पूर्णहरिप्रसादः ॥३॥
तत्कारणं विष्णुपदैकभक्ति-
र्ज्ञानेन युक्ता च तथा विरक्त्या ।
तत्कारणं श्रेष्टगुरूपदेश
इत्यादि स प्रोपदिदेश शिष्यान् ॥४॥

ಶ್ರೀ ಗುರುಸ್ವಾಮಿಯವರು ಶಿಷ್ಯರುಗಳಿಗೆ ತತ್ತ್ವೋಪದೇಶ ಮಾಡುವಂತವರಾದರು. ಅದು ಹೇಗೆಂದರೆ ಜೀವ, ಜಡ ಹಾಗೂ ಈಶ್ವರ ಈ ಮೂರು ಸತ್ಯ ವಸ್ತುಗಳಿವೆ. ರಮಾಬ್ರಹ್ಮರುದ್ರೇಂದ್ರಾದಿ ಜೀವಗಳು ಅನಂತವಾಗಿದ್ದು ನಿತ್ಯವಾಗಿದ್ದಾರೆ. ಅದರಲ್ಲಿಯೂ ರಮಾ (ಲಕ್ಷ್ಮೀ) ನಿತ್ಯ ಮುಕ್ತಳಾದ್ದರಿಂದ ಸಂಸಾರ ಬಂಧರಹಿತಳಾಗಿದ್ದಾಳೆ. ಬ್ರಹ್ಮರುದ್ರೇಂದ್ರಾದಿಗಳಿಗೆ ಸಂಸಾರ ಬಂಧ ಉಂಟು. ಪ್ರಕೃತಿ, ಅವ್ಯಾಕೃತ, ಆಕಾಶ, ಕಾಲಪ್ರವಾಹ, ಆಕಾರಾದಿ ವರ್ಣ, ಗುಣತ್ರಯ, ಮಹತ್ತತ್ತ್ವ ಅಹಂಕಾರ ತತ್ತ್ವ ಮೊದಲಾದ ನಿತ್ಯಾನಿತ್ಯದ್ದು ಜಡಗಳು ಅನೇಕವಾಗಿವೆ. ಈಶನಾದ ವಿಷ್ಣು ಒಬ್ಬನೇ ನಿತ್ಯ. ಜೀವಜೀವರಿಗೆ. ಜಡಜಡಕ್ಕೆ. ಜೀವಜಡಕ್ಕೆ, ಜೀವಈಶನಿಗೆ ಮತ್ತು ಜಡಈಶನಿಗೆ ಪರಸ್ಪರ ಭೇದವಿದ್ದು ಈ ಭೇದವು ಸತ್ಯ ಮತ್ತು ನಿತ್ಯವಾಗಿದೆ. ಜೀವರಲ್ಲಿಯೂ ಉತ್ತಮ ಜೀವ, ಮಧ್ಯಮ ಜೀವ, ಅಧಮ ಜೀವ ಎಂಬ ತಾರತಮ್ಯವಿದೆ. ಈ ತಾರತಮ್ಯ ನಿತ್ಯವಾಗಿದೆ. ಜೀವ ಜಡಗಳು ಯಾವಾಗಲೂ ಈಶಾಧೀನವಾಗಿವೆ. ಈಶನು ಜೀವಜಡಕ್ಕಿಂತಲೂ ಉತ್ತಮನು. ಸ್ವತಂತ್ರನು, ಅನಂತ ಸದ್ಗುಣ ಪರಿಪೂರ್ಣನು ಮತ್ತು ನಿರ್ದೋಷನೂ ಆಗಿರುವನು. ಜೀವರಲ್ಲಿ ಗುಣದೋಷಗಳು ತಾರತಮ್ಯಗಳು ಪರಿಮಿತವಾಗಿವೆ. ಜೀವ, ಜಡ, ಈಶರಿಗೆ ಬೇರೆ ಬೇರೆ ತರದ ಶಕ್ತಿಗಳಿವೆ. ಅವುಗಳಲ್ಲಿ ಈಶ ಶಕ್ತಿ ಅಪರಿಮಿತವಾಗಿದ್ದು, ಜೀವ ಜಡ ಶಕ್ತಿಗಳು ಪರಿಮಿತವಾಗಿವೆ. ಸಂಸಾರಿ ಜೀವವು ಮುಕ್ತನಾಗಲು ಇಲ್ಲವೇ ಲೀಲೆಯಿಂದ ಆ ಕೃಪಾಸಾಗರನಾದ ಈಶನು ಪ್ರಕೃತಿಯನ್ನು ಉಪಾದಾನವನ್ನಾಗಿ ಮಾಡಿಕೊಂಡು ಸತ್ಯವಾದರೂ ಅನಿತ್ಯವಾದ ಈ ಜಗತ್ತಿನ ಸೃಷ್ಟಿ, ಸ್ಥಿತಿ, ಲಯ. ನಿಯಮನ, ಜ್ಞಾನ, ಅಜ್ಞಾನ, ಬಂಧ ಮತ್ತು ಮೋಕ್ಷ ಎಂಬ ಈ ಕಾರ್ಯಗಳಿಗೆ ಕರ್ತೃನಾಗಿದ್ದಾನೆ. ಸಂಸಾರದಿಂದ ಮುಕ್ತರಾಗಿ ಸ್ವಯೋಗ್ಯತೆಗನುಸಾರವಾಗಿ ಶಾಶ್ವತ ಸ್ವರೂಪಾನಂದಾನುಭವ ಪಡೆಯುವದೇ ಜೀವರ ಮುಕ್ತಿಯಾಗಿದೆ. ಈ ಮುಕ್ತಿಯು ಕೇವಲ ಈಶ ಪ್ರಸಾದದಿಂದಲೇ ಜೀವರಿಗೆ ಪ್ರಾಪ್ತವಾಗುತ್ತದೆ. ಆತ್ಮಾತ್ಮೀಯ ಸಮಸ್ತ ವಸ್ತುಗಳ ಮೇಲಿರುವ ಪ್ರೇಮಕ್ಕಿಂತಲೂ ಹೆಚ್ಚಿನ ಅಖಂಡ ಪ್ರೇಮವು ಈಶನಲ್ಲಿರುವದೇ ಈಶಭಕ್ತಿಯೆನಿಸುವದು. ಈ ಈಶಭಕ್ತಿಯೇ ಈಶ ಪ್ರಸಾದಕ್ಕೆ ಕಾರಣವೆನಿಸುವದು. ತತ್ತ್ವಜ್ಞಾನಪೂರ್ವಕ ವಿಷಯ ವಿರಕ್ತಿಯಾಗದೇ ಆ ಭಕ್ತಿ ಸಿಗುವುದಿಲ್ಲ. ಸದ್ಗುರುಗಳ ಉಪದೇಶವಾಗದೇ ತತ್ತ್ವಜ್ಞಾನವಾಗದು. ॥೨॥ ॥೩॥ ॥೪॥

श्रीवीरविठ्ठलकृपामृतपात्रगात्र-
स्तत्त्वार्थबोधनविनाशितलोकपापः।
त्रैहोत्रिकद्विजवरार्चितपादपद्म -
स्तीर्थाटने स विदधे मतिमाप्तकामः ॥५॥

ಇದೇ ಪ್ರಕಾರವಾಗಿ ತತ್ತ್ವೋಪದೇಶದಿಂದ ಜನರ ಪಾಪನಾಶಕ ಕಾರ್ಯ ಮಾಡುತ್ತಿದ್ದ. ತಮ್ಮ ಮನೋರಥಗಳು ಸಾಧಿಸಿದ್ದರಿಂದ ತುಂಬ ಶಾಂತ ಮನಸ್ಕರಾದ ಶ್ರೀ ಜೀವೋತ್ತಮತೀರ್ಥ ಗುರುಮಹಾರಾಜರ ಭಕ್ತಿ ಪೂರ್ವಕ ತ್ರೈಹೋತ್ರಿಕ ಶ್ರೀ ಗೌಡ ಸಾರಸ್ವತ ಬ್ರಾಹ್ಮಣ ವೃಂದದವರು ಪಾದಪೂಜನ ಮಾಡುತ್ತಿರುವಾಗ ಶ್ರೀ ವೀರವಿಟ್ಠಲ ದೇವರ ಪೂರ್ಣಕೃಪಾ ಪಾತ್ರರಾದ ಶ್ರೀ ಗುರುಮಹಾರಾಜರ ಮನಸ್ಸಿನಲ್ಲಿ ಒಂದು ಆಲೋಚನೆ ಬಂದಿತು. ನಾನಾತೀರ್ಥ ಸ್ನಾನ ಮಾಡಬೇಕು. ನಾನಾಕ್ಷೇತ್ರದ ದೇವತೆಗಳ ದರ್ಶನ ಪಡೆಯಬೇಕು. ಈ ಯೋಗದಿಂದ ಕೃತಕೃತ್ಯರಾಗಬೇಕು.॥೫॥

सोऽयं यात्रार्थमगमदुत्तरां दिशमुत्तमाम्।
महायशास्तीर्थपदो जीवोत्तमयतीश्वरः ॥६॥

ಅತಿ ಪ್ರಸಿದ್ಧ, ಪರಮ ಪವಿತ್ರರಾದ ಶ್ರೀ ಜೀವೋತ್ತಮತೀರ್ಥ ಗುರುಮಹಾರಾಜರು ಮಹಾಯಾತ್ರೆಗಾಗಿ ಉತ್ತರದಿಶೆಗೆ ಪಯಣಿಸಿದರು. ॥೬॥

यती रमाब्रह्मशिवादिसेव्यं
क्षेत्रं हरेर्मञ्जुगुणि प्रसिध्दम्।
गत्वा स तत्रस्थमनन्तमाद्यं
श्रीवेङ्कटेशं शिरसा ननाम ॥७॥

ದಾರಿಯಲ್ಲಿ ಸಹ್ಯಾದ್ರಿ ಪರ್ವತದಲ್ಲಿರುವ ಶ್ರೀ ಲಕ್ಷ್ಮೀ ಬ್ರಹ್ಮರುದ್ರಾದಿಗಳಿಗೆ ಪೂಜ್ಯಮಾನವಾದ ಮಂಜುಗುಣಿ ಎಂಬ ಮಹಾಪ್ರಸಿದ್ಧ ವಿಷ್ಣು ಕ್ಷೇತ್ರಕ್ಕೆ ಬಂದರು. ಅಲ್ಲಿ ವಿರಾಜಮಾನರಾಗಿರುವ ಪುರಾಣಪುರುಷ ಹಾಗೂ ದೇಶತಃ ಕಾಲತಃ ಗುಣತಃ ಅಪರಿಚ್ಛಿನ್ನ ಶ್ರೀ ವೆಂಕಟೇಶ ದೇವರಿಗೆ ನಮನ ಗೈದರು. ॥೭॥

रमापतिं तत्र समर्च्य भक्त्या
ततः पुरस्तात्स ययौ यतीन्द्रः ।
नदीं प्रपश्यन्वरदां सुरेड्यां
स्नात्वाथ तस्यां पुरतो जगाम ॥८॥

ಪ್ರಾತಃಕಾಲದಲ್ಲಿ ಭಕ್ತಿಯಿಂದ ಶ್ರೀ ವೆಂಕಟೇಶ ದೇವರಿಗೆ ಷೋಡಶೋಪಚಾರ ಪೂಜೆ ಸಲ್ಲಿಸಿ ಅಲ್ಲಿಂದ ಕ್ರಮಪ್ರಾಪ್ತ ವರದಾ ನದಿಯಲ್ಲಿ ಸ್ನಾನ ಮಾಡಿ ಮುಂದೆ ಹೊರಟರು.॥೮॥

जीवोत्तमार्यो विजयाअभिधानां
पुरं ततः प्राप जनैः समृध्दाम्।
अल्लीअदिल्शेति महान्प्रसिध्दो
राजास तस्यां पुरि यावनेशः ॥९॥

ಮುಂದೆ ಪಯಣಿಸುತ್ತಾ ವಿಜಾಪುರಕ್ಕೆ ಮುಟ್ಟಿದರು. ಆ ಕಾಲದಲ್ಲಿ ಅಲ್ಲಿ ಬಹುದೊಡ್ಡ ಪ್ರಮಾಣದಲ್ಲಿ ಮುಸಲ್ಮಾನರು ವಾಸಿಸುತ್ತಿದ್ದು ಆದಿಲ್‌ಶಹಾ ಎಂಬ ಬಾದಶಹ ಇದ್ದನು. ॥೯॥

श्रुत्वा स्वपुर्यां समुपागतं तं
श्रीपादवर्यं यवनस्तदानीम् ।
अभ्याशमागत्य यतीश्वरस्य
सभाजयामास स भूमिपालः ॥१०॥

ತಮ್ಮ ರಾಜಧಾನಿಗೆ ಆಗಮಿಸಿದ ಶ್ರೀ ಗುರುಮಹಾರಾಜರ ಸುದ್ದಿ ಕೇಳಿ ಬಾದಶಹನು ಸ್ವಾಮಿ ಸನ್ನಿಧಿಯಲ್ಲಿ ಬಂದು ಸ್ವಾಮಿಗಳ ಸತ್ಕಾರ ಮಾಡಿದನು. ॥೧೦॥

राजा मुनीन्द्रस्य परीक्षणार्थं
पक्वामिषान्नं निजभक्षणार्हम् ।
संप्रेषयामास तदा यतीन्द्रो
ददर्श राज्ञा प्रहितं स मांसम् ॥११॥

ಶ್ರೀ ಗುರುಮಹಾರಾಜರನ್ನು ಪರೀಕ್ಷಿಸಬೇಕು ಎಂಬ ಉದ್ದೇಶದಿಂದ ಆ ಬಾದಶಹನು ಅರಮನೆಗೆ ಹೋಗಿ ಭಿಕ್ಷೆಗಾಗಿ ರವಾನಿಸಿದ ಸಾಹಿತ್ಯದಲ್ಲಿ ಮುಸಲ್ಮಾನರಿಗೆ ಯೋಗ್ಯವೆನಿಸುವ ಪಕ್ವ ಮಾಂಸವನ್ನು ಕಳುಹಿಸಿದನು. ಇದನ್ನು ಕಂಡು ಶ್ರೀ ಗುರು ಮಹಾರಾಜರ ಮನದಲ್ಲಿ ಅನೇಕ ವಿಚಾರಗಳು ಸುಳಿದವು. ॥೧೧॥

जीवोत्तमार्यो गुरुराज एष
तपःसमासादित तेजसा तत्।
प्रसूनराशिं विरचय्य सद्यः
संप्रेषयामास ततो नृपाय ॥१२॥

ಶ್ರೀ ಸ್ವಾಮಿ ಮಹಾರಾಜರು ತಮ್ಮ ತಪೋ ಸಾಮರ್ಥ್ಯದಿಂದ ಬಾದಶಹಾನು ಕಳುಹಿಸಿದ ಭಕ್ಷ್ಯಗಳ ಮೇಲೆ ಕಮಂಡಲೋದಕ ಪ್ರೋಕ್ಷಿಸಿ ನೋಡಲಾಗಿ ಅವು ಸುಗಂಧ ಪುಷ್ಪರಾಶಿಗಳಾದವು. ಅವುಗಳ ಸುವಾಸನೆ ಆ ಪ್ರದೇಶದಲ್ಲೆಲ್ಲಾ ಹರಡಿತು. ಆ ಪುಷ್ಪಗಳನ್ನು ಶ್ರೀ ಗುರುಮಹಾರಾಜರು ಬಾದಶಹನಿಗೆ ಪ್ರಸಾದ ರೂಪವಾಗಿ ಕಳುಹಿಸಿದರು. ॥೧೨॥

यतिप्रबर्हेण तदामिषं त -
त्प्रसूनराशिं रचितं जनेन्द्रः।
दृष्ट्वा स संस्मृत्य तपःप्रभावं
जीवोत्तमस्यामितमाप हर्षम् ॥१३॥

ಬಾದಶಹನು ಶ್ರೀ ಸ್ವಾಮಿಮಹಾರಾಜರ ತಪೋಸಾಮರ್ಥ್ಯ ನೋಡಿ ಆಶ್ಚರ್ಯ ಚಕಿತರಾದರು. ॥೧೩॥

पुत्रीयन्सह भार्योऽसौ राजा जीवोत्तमं गुरुम्।
उपागत्य नमश्चक्रे जानुपातपुरःसरम् ॥१४॥

ಪುತ್ರಾರ್ಥಿಯಾದ ಆ ಬಾದಶಹನು ತನ್ನ ಹೆಂಡತಿಯೊಂದಿಗೆ ಬಂದು ಮುಸಲ್ಮಾನಿ ಪದ್ಧತಿಯಂತೆ ಮೊಣಕಾಲೂರಿ ಸರ್ವ ಸಮರ್ಥರಾದ ಶ್ರೀಪಾದಂಗಳವರ ಸನ್ನಿಧಿಗೆ ನಮಸ್ಕರಿಸಿದರು. ॥೧೪॥

ततोऽमुं प्रार्थयामास सुतमन्वयभूषणम्।
दातुं समर्थाः श्रीपादा इत्यदल्शो महीपतिः ॥१५॥

ಪೂಜ್ಯ ಗುರುಮಹಾರಾಜರೇ, ತಾಪಸ ಶ್ರೇಷ್ಠರಾದ ತಾವು ಆಶ್ರಿತರ ಮನೋರಥ ಪೂರ್ಣಮಾಡುವ ಕಲ್ಪದ್ರುಮವಾಗಿದ್ದೀರಿ. ನಮ್ಮ ವಂಶಕ್ಕೆ ಅಲಂಕಾರಭೂತ ಎನಿಸಿಕೊಳ್ಳುವ ಪುತ್ರನನ್ನು ದಯಪಾಲಿಸುವ ಸಾಮರ್ಥ್ಯ ತಮಗಿದೆ. ಸತ್ಪುತ್ರ ಪ್ರಾಪ್ತಿಗಾಗಿ ಆಶೀರ್ವದಿಸಿ ನಮ್ಮನ್ನ ಕೃತಕೃತ್ಯರನ್ನಾಗಿ ಮಾಡಿರಿ ಎಂದು ಬಾದಶಹನು ಗುರುಗಳಲ್ಲಿ ಪ್ರಾರ್ಥಿಸಿದನು. ॥೧೫॥

श्रुत्वाथ राज्ञः सपरिग्रहस्य
सुतार्थिनो दीनतरं वचः सः ।
जीवोत्तमार्यो यतिराण्नृपाय
वरप्रदानाय मतिं चकार ॥१६॥

ಪತ್ನಿ ಸಮೇತ ಬಂದ ಬಾದಶಹನು ತನಗೆ ಪುತ್ರ ಪ್ರಾಪ್ತಿಗಾಗಿ ಮಾಡಿದ ಅತಿ ದೀನ ನುಡಿಯನ್ನು ಕೇಳಿ ಶ್ರೀ ಜೀವೋತ್ತಮತೀರ್ಥರು ಆ ಬಾದಶಹನಿಗೆ ಪುತ್ರಪ್ರಾಪ್ತಿಯ ವರದಾನ ಮಾಡಲು ಸಿದ್ಧರಾದರು. ॥೧೬॥

अभिमन्त्र्य फलं तस्मै सभार्याय ददावयम् ।
फलं जग्ध्वा तदा राज्ञी सगर्भाभूत्क्षणात्किल ॥१७॥

ಯತಿವರೇಣ್ಯರು ಪುತ್ರಕಾಮೇಷ್ಟಿ ಮಂತ್ರದಿಂದ ಒಂದು ಫಲವನ್ನು ಅಭಿಮಂತ್ರಿಸಿ ಆ ಬಾದಶಹನಿಗಿತ್ತರು. ಯತಿವರ್ಯರ ಆಜ್ಞೆಯಂತೆ ಬಾದಶಹನ ಪತ್ನಿಯು ತತ್ಕ್ಷಣ ಆ ಫಲವನ್ನು ಭಕ್ಷಿಸಲಾಗಿ ಕೂಡಲೇ ಅವಳು ಗರ್ಭವತಿಯಾದಳು. ॥೧೭॥

निरीक्ष्य तपसो बलं यवनराजधानीपति-
स्तथा विभवसंचयं यतिवराय तस्मै ददौ।
वरं च शिबिकासनं धवलचामराभ्यां युतं
तथा रुचिरदीपिके विमलमातपत्रं सितम् ॥१८॥

ಬಾದಶಹನು ಶ್ರೀ ಗುರುಮಹಾರಾಜರ ತಪೋಸಾಮರ್ಥ್ಯವನ್ನು ಅವಲೋಕಿಸಿ ಗುರುಸ್ವಾಮಿಯವರಿಗೆ ಶ್ವೇತಛತ್ರ, ಶ್ವೇತಚಾಮರ, ದೀಪಿಕೆ ಮತ್ತು ಶಿಬಿಕೆಮೇಣೆಯನ್ನು ಕೊಟ್ಟರಲ್ಲದೇ ಬಹಳಷ್ಟು ಧನವನ್ನು ಕೊಟ್ಟನು. ॥೧೮॥

ददौ विजयपत्रिकां प्रथितराजमुद्राङ्किताम्
समुद्रवलयाधिपो यवनपो ह्यदिल्शाभिघः।
तदा यतिजनाधिपः करुणया धरित्र्याः पतिं
प्रतिप्रणयपूर्वकं समनुजं समाहर्षयत् ॥१९॥

ಮತ್ತು ಆ ಅಲಿ ಆದಿಲಶಹ ಬಾದಶಹನು ಶ್ರೀ ಪಾದವರ್ಯರಿಗೆ ಯವನ ಲಿಪಿಯುಳ್ಳ ರಾಜಮುದ್ರೆಯನ್ನು ಮತ್ತು ಸುಂದರ ಚೌಕಟ್ಟಿನಲ್ಲಿಟ್ಟ ರಹದಾರಿ ಪತ್ರವನ್ನು ಸಮರ್ಪಿಸಿ ತಮ್ಮ ಪದ್ಧತಿಯಂತೆ ನಮಸ್ಕರಿಸಲಾಗಿ ಗುರು ಮಹಾರಾಜರು ಅವರನ್ನು ಆಶೀರ್ವದಿಸಿ ಸಂತುಷ್ಟಗೊಳಿಸಿದರು. ॥೧೯॥

**इत्थमुग्रतपास्तेन राज्ञा समभिपूजितः**
**उवास कतिचिन्मासांस्तत्र श्रीविजयापुरे ॥२०॥**

ಮಹಾನ್ ತಪಸ್ವಿ ಶ್ರೀ ಜೀವೋತ್ತಮ ತೀರ್ಥ ಸ್ವಾಮೀಜಿಯವರು ಬಾದಶಹನು ಆಗ್ರಹಪೂರ್ವಕ ಸಲ್ಲಿಸಿದ ಪ್ರಾರ್ಥನೆಯ ಮೇರೆಗೆ ವಿಜಾಪುರದಲ್ಲಿ ಕೆಲತಿಂಗಳು ವಾಸವಾಗಿದ್ದರು. ॥೨೦॥

**ततः प्रतस्थे पुरतो यात्रार्थं स महामनाः।**
**वाराणसीं कुरुक्षेत्रं प्रयागं बंदरीं तथा ॥२१॥**
**प्राचीं सरस्वतीं पश्यन्वाराहं पुष्करं ययौ।**
**ततः शिलानदीं पुण्यां गन्तुं चक्रे मनो गुरुः ॥२२॥**

ತದನಂತರ ವಿಜಾಪುರದಿಂದ ಕಾಲ್ನಡಿಗೆಯಿಂದ ಶ್ರೀ ಗುರುಮಹಾರಾಜರು ಪ್ರಯಾಗ, ಕಾಶೀ, ಬದರಿಕಾಶ್ರಮ, ಕುರುಕ್ಷೇತ್ರ, ಪ್ರಾಚೀ ಸರಸ್ವತಿ ಮತ್ತು ವರಾಹ (ಬ್ರಹ್ಮ) ಪುಷ್ಕರ ತೀರ್ಥಕ್ಷೇತ್ರಗಳನ್ನ ಸಂದರ್ಶಿಸಿ ಶಿಲಾನದಿಯತ್ತ ಹೊರಟರು. ॥೨೧॥೨೨॥

**गच्छतः पथि ततो यतेः पुरो**
**दृष्टिगोचरमभूत्सरित्तटे।**
**विग्रहत्रयमुपाददे यति -**
**र्विट्ठलस्य किल दिव्यमभ्दुतम् ॥२३॥**

ಪ್ರಯಾಣ ಮುಂದುವರಿಯುತ್ತಿದ್ದಂತೆ ಗುರುಮಹಾರಾಜರಿಗೆ ಶಿಲಾನದಿಯ ದಂಡೆಯ ಮೇಲೆ ಶ್ರೀ ವಿಟ್ಠಲ ದೇವರ ಧಾತುಮಯ ಮೂರು ವಿಗ್ರಹಗಳು ಗೋಚರಿಸಿದವು. ಆಶ್ಚರ್ಯ ಭರಿತರಾಗಿ ಗುರುಸ್ವಾಮಿಗಳು ಆ ವಿಗ್ರಹಗಳನ್ನು ಸ್ವೀಕರಿಸಿದರು. ॥೨೩॥

**पाण्डुरङ्गस्य मूर्तीनां त्रयं प्राप्य सुदुर्लभम्।**
**मुदं प्राप यतीशः स चिन्तयन्वीरविठ्ठलम् ॥२४॥**

ಆಗ ಶ್ರೀಪಾದಂಗಳವರು ಭೂವಿಜಯ ವಿಟ್ಠಲ ದಿಗ್ವಿಜಯ ವಿಟ್ಠಲ ಮತ್ತು ವೀರ ವಿಟ್ಠಲ ಎಂದು ಹೆಸರಿಸಿದ ಆ ಮೂರು ಪ್ರತಿಮೆಗಳನ್ನು ತೆಗೆದುಕೊಂಡು ವಿಶೇಷತಃ ಶ್ರೀ ವೀರವಿಟ್ಠಲ ಮೂರ್ತಿಯ ಸ್ಮರಣೆ ಮಾಡಿ ಅತ್ಯಂತ ಸಂತೋಷ ಪಟ್ಟರು. ॥೨೪॥

**तदागतस्तत्र महामुनीन्द्रः**
**श्रीवादिराजो यतिराजराजः।**
**समागमं प्राप्य च तस्य तेन**
**संभावितोऽयं यतिराड्ययौ पुरः ॥२५॥**

ಆ ಸಮಯ ಅವರ ಆಶ್ರಮದಲ್ಲಿ ಸುಧಾಪುರ ಮಠದ ಶ್ರೀಮದ್ ವಾದಿರಾಜತೀರ್ಥ ಶ್ರೀಪಾದರವರ ಆಗಮನವಾಯಿತು (ಈ ಶ್ರೀಗಳವರು ಉಡುಪಿಯ ಅಷ್ಟಮಠಾಂತರ್ಗತ ಸ್ವಾದಿ ಮಠದ ಸ್ವಾಮಿ ಮಹಾರಾಜರು) ಉಭಯ ಶ್ರೀಪಾದಂಗಳವರ ಭೆಟ್ಟಿಯಾಯಿತು. ಜೀವೋತ್ತಮ ತೀರ್ಥ ಸ್ವಾಮಿಯವರನ್ನು ಅವರು ಸತ್ಕರಿಸಿದರು. ಮುಂದೆ ಶಿಲಾನದಿಯ ಉತ್ತಮ ತೀರವನ್ನು ಸೇರಿದರು.॥೨೫॥

**गत्वा नदीं तां सुरवर्यसेवितां**
**पस्पर्श नीरं किल योगिवर्यः।**
**महाध्वनः पारदिदृक्षयैव**
**व्रतं चकाराशनहीनमेषः ॥२६॥**

ಶ್ರೀ ಜೀವೋತ್ತಮ ತೀರ್ಥ ಗುರುವರ್ಯರು ದೇವಶ್ರೇಷ್ಠರಿಂದ ಸೇವಿಸಲ್ಪಡುವ ಶಿಲಾನದಿಯನ್ನು ತಲುಪಿ ನದಿಯ ಪವಿತ್ರೋದಕದ ಸ್ಪರ್ಶನಗೈದು, ಆ ಪುಣ್ಯನದಿಯ ತೀರದಲ್ಲಿ ಆಸೀನರಾದರು. ಮಹಾಪ್ರಸ್ಥಾನದ ಉದ್ದೇಶದಿಂದ ಶಕ್ತಿ ಪಡೆಯುವುದಕ್ಕಾಗಿ ನಿರಶನ ವ್ರತವನ್ನು ಆರಂಭಿಸಿದರು. ॥೨೬॥

ततो भगवदिच्छया गगनतः समीरध्वनिः
श्रुतो हि यतिना यते तव विमानमायास्यति।
दिनैः कतिपयैर्भवान्विबुधवृन्दसंसेवितो
भविष्यति भवाम्यहं तव दृशस्तदा गोचरः ॥२७॥

ಕೆಲಕಾಲ ಕಳೆದ ನಂತರ ಅವರು ಅಂಗೀಕರಿಸಿದ ವ್ರತಾಚರಣೆ ಉದ್ದೇಶವನ್ನು ಗಮನಿಸಿ ಪರಮಾತ್ಮನ ಇಚ್ಛೆಯಂತೆ ಅವರ ಆಶ್ರಮದಲ್ಲಿ ಆಕಾಶವಾಣಿಯು ಆಯಿತು. ಯತಿವರ್ಯನೇ, ನಿನಗಾಗಿ ಸತ್ಯಲೋಕದಿಂದ ವಿಮಾನ ಬರಲಿದೆ. ಅದರಲ್ಲಿ ನೀನು ಆಸೀನನಾಗಿ ಜೀವನ್ಮುಕ್ತರ ಸಭೆಗೆ ಬಂದರೆ ನಿನಗೆ ಅಲ್ಲಿ ನನ್ನ ದರ್ಶನವಾಗುವದು. ॥೨೭॥

भवाम्यहं यते नूनं भवेऽस्मिन्नाक्षिगोचरः
अतो निवर्तय मनो व्रतात्परमदुष्करात् ॥२८॥

ಎಲೈ ಯತಿವರ್ಯನೇ, ಈ ಜನ್ಮದಲ್ಲಿ ನಾನು ಪ್ರತ್ಯಕ್ಷ ನಿನ್ನನ್ನು ಭೆಟ್ಟಿಯಾಗಲಾರೆನು. ಆದ್ದರಿಂದ ದೇಹವನ್ನು ದಂಡಿಸಿ ಕ್ಷೀಣಗೊಳಿಸಬೇಡ. ಪ್ರಾರಂಭಿಸಿದ ವ್ರತವನ್ನು ನನಗೆ ಸಮರ್ಪಣೆ ಮಾಡು. ॥೨೮॥

श्रुत्वेति वाणीं गगने समीरितां
समापयामास महाव्रतं तत्।
यतिर्निवृत्तः स ततो जगाम
वृन्दावनं पावनमच्युतात्मा ॥२९॥

ಈ ರೀತಿ ಆಕಾಶವಾಣಿಯನ್ನು ಕೇಳಿ ಯತಿವರ್ಯರು ಅಂಗೀಕೃತ ವ್ರತದ ಸಮಾಪ್ತಿಗೈದರು. ಪರಮಾತ್ಮನ ಸ್ಮರಣೆ ಮಾಡುತ್ತ ವೃಂದಾವನ ತಲುಪಿದರು. ॥೨೯॥

विश्रान्तितीर्थे हरिलोकयात्रा -
विश्रान्तिदेऽसौ विनिमज्य कृष्णम् ॥
स्मृत्वा यतिः कुञ्जवनं च दृष्ट्वा
तेनैव मार्गेण ययौ दिशं स्वाम् ॥३०॥

ವೃಂದಾವನದಲ್ಲಿ ಶ್ರೀ ಗೋಪಾಲಕೃಷ್ಣ ದೇವರ ಸ್ಮರಣೆಗೈದು ಪರಮಪವಿತ್ರ ವೈಕುಂಠಲೋಕ ಯಾತ್ರೆಯ ವಿಶ್ರಾಂತಿ ಸ್ಥಾನವಾಗಿರುವ ಆ ವಿಶ್ರಾಂತಿ ತೀರ್ಥದಲ್ಲಿ ಸ್ನಾನಗೈದು ಕುಂಜವನ (ಗೋಪಿಕೆಯರು ಮತ್ತು ಶ್ರೀ ಕೃಷ್ಣನು ವಿಹರಿಸಿದ ಲತಾವನ) ಸಂದರ್ಶಿಸಿ ಅದೇ ಮಾರ್ಗವಾಗಿ ದಕ್ಷಿಣದಿಕ್ಕಿಗೆ ಹೊರಟರು. ॥೩೦॥

**क्रमेण भीमातटवासिनं हरिं**
**नत्वाथ संपूज्य जगाम कृष्णाम् ।**
**निमज्य तस्यां प्रययौ स पावनं**
**क्षेत्रं हरेर्भार्गवनामकस्य ॥३१॥**

ಪಾದಯಾತ್ರೆಯನ್ನು ಮುಂದುವರಿಸುತ್ತಿರುವಂತೆಯೇ ಮಾರ್ಗದಲ್ಲಿ ಲಭ್ಯವಾದ ತೀರ್ಥಗಳಲ್ಲಿ ಸ್ನಾನಗೈಯುತ್ತಾ ಕ್ರಮವಾಗಿ ಪಂಢರಪುರಕ್ಕೆ ತಲುಪಿದರು. ಭೀಮಾತಟ ನಿವಾಸಿ ಶ್ರೀ ಪಾಂಡುರಂಗನ ದಿವ್ಯದರ್ಶನ ಪಡೆದು ಶ್ರೀ ಕೃಷ್ಣಾನದಿಯಲ್ಲಿ ಸ್ನಾನ ತೀರಿಸಿ ಗೋಮಾಂತಕ (ಗೋವೆ) ಕ್ಷೇತ್ರಕ್ಕೆ ಆಗಮಿಸಿದರು. ॥೩೧॥

**गोमाचलप्रान्तनिवासिनं स**
**रामं नमस्कृत्य ययौ पुरस्तात्।**
**अङ्कोलकक्षेत्रमवाप्य योगी**
**बभौ स्वकीयार्चितपादपीठः ॥३२॥**

ಯತಿವರೇಣ್ಯರು ಗೋಮಾಂತಕದ ಶ್ರೀ ಪರಶುರಾಮ ದೇವರ ಸಂದರ್ಶನ ಪಡೆದು ಅಲ್ಲಿಂದ ಅಂಕೋಲೆಗೆ ತಲುಪಿದರು. ಅಲ್ಲಿ ಸ್ವಕೀಯ ವರ್ಗದ ಗೌಡ ಸಾರಸ್ವತ ಬ್ರಾಹ್ಮಣರು ಪಾದಪೂಜೆ ಮೊದಲಾದ ಉಪಚಾರಗಳಿಂದ ಅವರ ಸತ್ಕಾರ ಮಾಡಿದರು.॥೩೨॥

**संप्राप्य गोकर्णमपो जितात्मा**
**मठं प्रतिष्ठाप्य स तत्र योगी।**
**श्रीविट्ठलं देवमुदारविक्रमं**
**संस्थापयामास तपोधनेन्द्रः ॥३३॥**

ಅಲ್ಲಿಂದ ಶ್ರೀ ಗುರುಮಹಾರಾಜರು ಗೋಕರ್ಣಕ್ಕೆ ಬಂದು ಅಲ್ಲಿ ಒಂದು ಮಠವನ್ನು ನಿರ್ಮಿಸಿ ಶ್ರೀ ಭೂವಿಜಯ ವಿಟ್ಠಲಮೂರ್ತಿಯನ್ನು ಪ್ರತಿಷ್ಠಾಪಿಸಿದರು.॥೩೩॥

ततो जगामाशु निजं पुरं त -
ज्जीवोत्तमो गर्भपुरं प्रपेदे।
मठालयं तत्र विनिर्ममेऽसौ
बभौ प्रतिष्टाप्य च तत्र विट्ठलम् ॥३४॥

ಅಲ್ಲಿಂದ ಪ್ರಯಾಣ ಮುಂದುವರಿಸಿ ಶ್ರೀಗಳು ಭಟ್ಕಳಕ್ಕೆ ಬಂದರು. ಮುಂದೆ ಬಸರೂರಿಗೆ ಪ್ರಯಾಣ ಮಾಡಿ ಒಂದು ಮಠವನ್ನು ನಿರ್ಮಿಸಿ ಅಲ್ಲಿ ಶ್ರೀ ದಿಗ್ವಿಜಯ ವಿಟ್ಠಲ ದೇವರ ಮೂರ್ತಿಯನ್ನು ಸ್ಥಾಪಿಸಿ ಕೃತಕೃತ್ಯರಾದರು. ॥೩೪॥

तदर्चकानां खलु वृत्तिमूलं
चक्रे स्ववर्गं परिबोधयन्सः।
तेनार्चिताङ्घ्रि पुनरागतोऽभू -
न्मटालयं स्वं गतसङ्गदोषः ॥३५॥

ಬಸರೂರು ಮಠದ ವ್ಯವಸ್ಥೆಯನ್ನು ನೋಡಿಕೊಳ್ಳಲು ಅಲ್ಲಿಯ ಸ್ವಕೀಯ ವರ್ಗಕ್ಕೆ ಆಜ್ಞೆ ಮಾಡಿ ಶ್ರೀ ದಿಗ್ವಿಜಯ ವಿಟ್ಠಲ ದೇವರ ಪ್ರಧಾನ ಅರ್ಚಕ-ಋಗ್ವೇದಿ ಆಶ್ವಲಾಯನೀಯ ಶಾಖೆಯ ಪ್ರಚಂಡ ವಿದ್ವಾನ್‌ರೆನಿಸಿಕೊಳ್ಳುವ ಆಚಾರ್ಯರನ್ನು ಪೂಜೆಗಾಗಿ ನೇಮಿಸಿ ಅವರಿಗೆ ವೃತ್ತಿಯನ್ನು ಹಾಗೂ ಸ್ವವರ್ಗೀಯರ ಪೌರೋಹಿತ್ಯ ವನ್ನೂ ದಯಪಾಲಿಸಿದರು. ಎಲ್ಲರಿಂದ ಪೂಜಿಸಲ್ಪಟ್ಟು ಭಟ್ಕಳದ ಮೂಲಮಠಕ್ಕೆ ಹಿಂತಿರುಗಿದರು. ॥೩೫॥

शिष्यं चकाराथ बटुं विरक्तं
मुनिर्विनीतं पुरुषोत्तमाख्यम्।
तस्मै तृतीयां तनुमाप्तकामः
श्रीविट्ठलस्यैष ददौ तदानीम् ॥३६॥

ಕೆಲ ದಿನಗಳ ನಂತರ ವಿರಕ್ತ ಸದಾಚಾರ ನಿಷ್ಠ ಬ್ರಹ್ಮಚಾರಿಯೋರ್ವರಿಗೆ ಶಿಷ್ಯ ದೀಕ್ಷೆ ಕೊಟ್ಟು ಶ್ರೀ ಪುರುಷೋತ್ತಮ ತೀರ್ಥ ಎಂದು ನಾಮಕರಣ ಮಾಡಿ ವೀರ ವಿಟ್ಠಲ ದೇವರ ಪ್ರತಿಮೆಯನ್ನು ಸರ್ವೋಪಸ್ಕರದೊಂದಿಗೆ ಅವರ ಸ್ವಾಧೀನ ಮಾಡಿದರು. ॥೩೬॥

संस्थाप्य शिष्यं स्वमठे यतीन्द्रो
द्रष्टुं किलैच्छद्वृषभाद्रिनाथम्।
ततो ययौ वेणुपुरं क्रमेण
ततो मुनिः शेषगिरिं प्रपेदे ॥३७॥

ಶಿಷ್ಯ ಸ್ವಾಮಿಯವರಾದ ಶ್ರೀ ಪುರುಷೋತ್ತಮತೀರ್ಥರನ್ನು ಮಠದಲ್ಲಿಟ್ಟು ಬಿದರೂರು ಮಾರ್ಗವಾಗಿ ಶ್ರೀ ವೆಂಕಟೇಶ ದೇವರ ದರ್ಶನೋದ್ದೇಶದಿಂದ ಶ್ರೀ ವೆಂಕಟಗಿರಿ (ತಿರುಪತಿ)ಯನ್ನು ತಲುಪಿದರು. ॥೩೭॥

तत्रस्थमीशं कमलायुतं हरिं
श्रीवेङ्कटेशं शिरसा ननाम।
संपूज्य नारायणमादिदेवं
श्रीशैलराजं स ततो जगाम ॥३८॥

ಅಲ್ಲಿ ಶ್ರೀ ಆದಿನಾರಾಯಣರೆನಿಸಿದ ಶ್ರೀ ಲಕ್ಷ್ಮೀ ವೆಂಕಟೇಶ ದೇವರನ್ನು ಶಿರಸಾವಂದಿಸಿ ಪೂಜೋಪಚಾರಗಳನ್ನು ಸಮರ್ಪಿಸಿ ಅಲ್ಲಿಂದ ಶ್ರೀ ಶೈಲರಾಜ ಯಾತ್ರೆಗೆ ಹೊರಟರು. ॥೩೮॥

जगाम कंचीं वरदायकं हरिं
नत्वाथ संपूज्य ययौ पुरस्तात् ।
क्षेत्राणि पश्यन्प्रययौ स सेतुं
क्रमेण जीवोत्तमतीर्थवर्यः ॥३९॥

ಶ್ರೀ ಜೀವೋತ್ತಮತೀರ್ಥ ಗುರುವರ್ಯರು ಕಾಂಚೀಕ್ಷೇತ್ರಕ್ಕೆ ಆಗಮಿಸಿ ಶ್ರೀ ವರದರಾಜ ದೇವರನ್ನು ಅಭಿವಂದಿಸಿ ತೀರ್ಥಕ್ಷೇತ್ರಗಳನ್ನು ಸಂದರ್ಶಿಸುತ್ತಾ ರಾಮೇಶ್ವರ ಕ್ಷೇತ್ರಕ್ಕೆ ತಲುಪಿದರು. ॥೩೯॥

निमज्य तस्मिन्पुरतो गतोऽयं
श्रीपद्मनाभं परमं यतीन्द्रः।
ततः क्रमेणायमवाप दिव्यं
क्षेत्रं मुनीशः किल रौप्यपीठम् ॥४०॥

ಅಲ್ಲಿ ಸ್ನಾನಾದಿ ವಿಧಿಗಳನ್ನಾಚರಿಸಿ ಮುಂದೆ ಅನಂತ ಪದ್ಮನಾಭ-ಪುರಿಯಲ್ಲಿಯ (ತ್ರಾವಣಕೋರ) ಶ್ರೀ ಅನಂತ ಪದ್ಮನಾಭದೇವರ ದರ್ಶನ ಪಡೆದು ಕ್ರಮವಾಗಿ ಶ್ರೀ ಕ್ಷೇತ್ರ ಉಡುಪಿಯನ್ನು ತಲುಪಿದರು. ॥೪೦॥

**तत्रापि पश्यन्यदुवंशकेतुं**
**ननाम संतुष्टमना मनस्वी।**
**प्राप्तस्ततो गर्भपुरं महात्मा**
**श्रीविट्ठलं देवमपूजयत्सः ॥४१॥**

ಪ್ರಸನ್ನಾಂತಃಕರಣದಿಂದ ಶ್ರೀ ಗುರುಸ್ವಾಮೀಜಿಯವರು ಉಡುಪಿಯಲ್ಲಿಯ ಶ್ರೀಮನ್ ಮಧ್ವಾಚಾರ್ಯ ಪ್ರತಿಷ್ಠಿತ ಶ್ರೀ ಕೃಷ್ಣಮೂರ್ತಿಯ ದರ್ಶನಗೈದು ಬಸರೂರಿಗೆ ಆಗಮಿಸಿ ಅಲ್ಲಿ ಶ್ರೀ ದಿಗ್ವಿಜಯ ವಿಟ್ಠಲಾರ್ಚನೆಗೈಯುತ್ತ ಕೆಲದಿನ ವಾಸ್ತವ್ಯ ಮಾಡಿದರು. ॥೪೧॥

**ततो वृत्तपुरं प्राप्तो जीवोत्तमगुरुः पुनः**
**भक्तिमान्परमे विष्णौ सदण्डवरपादुकः ॥४२॥**

ಸರ್ವೋತ್ತಮ ಶ್ರೀ ಮನ್ನಾರಾಯಣ ದೇವರ ಪರಮ ಭಕ್ತರೆನಿಸಿದ ಶ್ರೀ ಜೀವೋತ್ತಮತೀರ್ಥ ಗುರು ಮಹಾರಾಜರು ಬಸರೂರಿನಿಂದ ದಂಡ, ಪಾದುಕಾಸಹಿತ ಪಾದಯಾತ್ರೆ ಮಾಡಿ ಭಟ್ಕಳಕ್ಕೆ ಬಂದರು. ॥೪೨॥

**शिलामयीं विट्ठलमूर्तिमत्र**
**प्रतिष्ठितां तां मठबाह्यदेशे।**
**आग्नेयकोणे स यतिप्रबर्हः**
**समर्चयामास मुदा बुधेन्द्रः ॥४३॥**

ಅಲ್ಲಿ ಸ್ವಮಠದ ಹೊರಗಿನ ಆಗ್ನೇಯ ಪ್ರದೇಶದಲ್ಲಿ ಸ್ಥಾಪಿಸಿದ ಶಿಲಾಮಯ ಶ್ರೀ ವಿಟ್ಠಲ ಮೂರ್ತಿಯ ಉಪಾಸನೆ ಮಾಡತೊಡಗಿದರು. ॥೪೩॥

**उवास तत्रैव महानुभावो**
**जीवोत्तमार्यः समयेन यानम्।**
**अपश्यदादित्यसमानतेजः**
**स्फुरत्पताकाभिनवं महात्मा ॥४४॥**

ಈ ರೀತಿ ಮಹಾನುಭಾವರಾದ ಶ್ರೀಮದ್ ಜೀವೋತ್ತಮ ತೀರ್ಥ ಶ್ರೀಪಾದ ವಡೇರ ಸ್ವಾಮೀಜಿಯವರು ಭಟ್ಕಳದಲ್ಲಿ ಇದ್ದಾಗ ಒಂದು ದಿನ ಸೂರ್ಯನಂತೆ ಪ್ರಕಾಶಮಾನವಾದ ನಾನಾತರದ ಪತಾಕಾದಿಗಳಿಂದ ಸುಶೋಭಿತವಾದ ದಿವ್ಯ ವಿಮಾನ ಭಗವತ್ ಆಜ್ಞೆಯ ಮೇರೆಗೆ ಬಂದಿದ್ದನ್ನು ಕಂಡರು. ಹರ್ಷಭರಿತರಾದರು. ॥೪೪॥

**तदैव संस्मृत्य हरिं वरेण्यं**
**नारायणं देवमनन्तमाद्यम्।**
**ध्यानं गतस्तत्र समाधिवृत्त्या**
**योगाधिरूढस्तनुमुत्ससर्ज ॥४५॥**

ಶ್ರೀ ಗುರುವರೇಣ್ಯರು ಯೋಗಾಸನಾರೂಢರಾದರು. ಆದಿ ಮಧ್ಯಾಂತರಹಿತ, ಪುರಾಣ ಪುರುಷ, ಸರ್ವ ಸದ್ಗುಣ ಪರಿಪೂರ್ಣ, ರಮಾ ಬ್ರಹ್ಮಾದಿಗಳಿಗಿಂತಲೂ ಉತ್ತಮನಾದ ಶ್ರೀಮನ್ನಾರಾಯಣನ ಸ್ಮರಣೆಗೈಯುತ್ತಾ ಸಮಾಧಿ ಯೋಗದಿಂದ ಧ್ಯಾನ ನಿಷ್ಠರಾಗಿ ನಶ್ವರ ದೇಹತ್ಯಾಗ ಮಾಡಿದರು. ॥೪೫॥

**ततो यतीनां प्रवरः स दिव्यां**
**तनुं दधानोऽर्कशताधिकप्रभाम्।**
**विमानवर्यं स्वयमारुरोह**
**सुनन्दनन्दादिभिरन्वितः सन् ॥४६॥**

ಯತಿವರೇಣ್ಯರು ಶತಸೂರ್ಯ ಪ್ರಭೆಯುಳ್ಳ ತೇಜಸ್ವಿ ದೇಹ ಧರಿಸಿ ಸುನಂದ ನಂದಾದಿ ವಿಷ್ಣು ಪಾರ್ಷದರೊಂದಿಗೆ ಮುಂದೆ ಕಾಣುವ ವಿಮಾನಾರೋಹಣ ಮಾಡಿದರು. ॥೪೬॥

तदा विमानोपरि पुष्पवृष्टि -
र्बभूव मुक्ता सुरनायिकाभिः ।
खमुत्पपाताशु विमानुमुत्तमं
मरुत्पथे दुन्दुभिनिस्वनोऽभवत् ॥४७॥

ಆ ಸಮಯ ದೇವತಾ ಸ್ತ್ರೀಯರಿಂದ ವಿಮಾನದ ಮೇಲೆ ಪುಷ್ಪವೃಷ್ಟಿ ಆಯಿತು. ಮತ್ತು ವಿಮಾನವು ಆಕಾಶ ಮಾರ್ಗದಲ್ಲಿ ಕ್ರಮಿಸುತ್ತಿದ್ದಂತೆ ದೇವದುಂದುಭಿಗಳ ವಾದ್ಯಘೋಷ ಪ್ರಾರಂಭವಾಯಿತು. ॥೪೭॥

एतस्मिन्नेव समये रौप्यपीठमठालये।
वादिराजयतिः कृष्णं नीराजयितुमुद्यतः ॥४८॥

ಇದೇ ಸಮಯಕ್ಕೆ ಶ್ರೀ ಉಡುಪಿ ಕ್ಷೇತ್ರದಲ್ಲಿ ಶ್ರೀಮದ್ ವಾದಿರಾಜ ಸ್ವಾಮಿಯವರು ಶ್ರೀಕೃಷ್ಣನಿಗೆ ಮಂಗಲಾರತಿ ಮಾಡುತ್ತಿದ್ದರು. ॥೪೮॥

तदा वियति योगीन्द्रमपश्यत्स विमानगम्।
समुत्थाय नमस्कृत्य नीरांजनमथाकरोत् ॥४९॥

ಅಷ್ಟರಲ್ಲಿ ಆಕಾಶದಲ್ಲಿ ಮೊಳಗುತ್ತಿರುವ ದೇವದುಂದುಭಿ ಘೋಷವನ್ನು ಅವರು ಕೇಳಿ ಮೇಲೆ ನೋಡಿದರು. ದಿವ್ಯ ವಿಮಾನದಲ್ಲಿ ಶ್ರೀಮದ್ ಜೀವೋತ್ತಮತೀರ್ಥರವರು ಕುಳಿತು ಪಯಣಿಸುತ್ತಿದ್ದನ್ನು ಕಂಡು ಸಮುತ್ಥಾಯ ಪೂರ್ವಕ ನೀರಾಂಜನವನ್ನು ಬೆಳಗಿಸಿದರು. ॥೪೯॥

तद्दृष्ट्वा महदाश्चर्यं पप्रच्छुः स्वामिनं द्विजाः।
किमिदं क्रियते स्वामिन्गगने किं प्रदृश्यते ॥५०॥

ಈ ಆಶ್ಚರ್ಯಕಾರಕ ಘಟನೆಯನ್ನು ಶ್ರೀ ಉಡುಪಿ ಮಠದಲ್ಲಿರುವ ಬ್ರಾಹ್ಮಣ ವೃಂದವು ನೋಡಿ ಶ್ರೀ ವಾದಿರಾಜತೀರ್ಥ ಶ್ರೀಪಾದಂಗಳವರನ್ನು ಕೇಳಿದರು. ಮಹಾರಾಜರೇ! ಇದೇನು ಮಾಡುವಿರಿ ಆಕಾಶದಲ್ಲಿ ನಿಮಗೆ ಏನು ಕಾಣುತ್ತದೆ? ॥೫೦॥

**इति पृष्टो वादिराजः स्वानुवाच समुत्सुकः ।**
**श्रीपादानां समाहात्म्यं पावनं विजयप्रदम् ॥५१॥**

ಸ್ವಕೀಯ ಶಿಷ್ಯರ ಪ್ರಶ್ನೆಗಳನ್ನು ಕೇಳಿ ಶ್ರೀ ವಾದಿರಾಜತೀರ್ಥ ಗುರುಗಳು ಶ್ರೀ ಜೀವೋತ್ತಮ ಶ್ರೀಪಾದಂಗಳವರ ವಿಜಯಪ್ರದ ಹಾಗೂ ಲೋಕಪಾವನ ಚರಿತ್ರೆಯನ್ನು ಅವರಿಗೆ ಕಥನ ಮಾಡಿದರು. ॥೫೧॥

**इति श्रीमदग्निहोत्रिकृष्णद्वैपायनपौराणिकसुतनरसिंहपौराणिक - विरचिते सार्थे श्रीगुरुपरम्परामृते द्वितीयः स्तबकः ॥२॥**

(श्रीकुमठानारायणचार्य रचित 'श्रीगुरुपंरपरामृता'तून)

**ಶ್ರೀ ಕುಮಠಾ ನಾರಾಯಣ ಆಚಾರ್ಯ ರಚಿತ ಶ್ರೀ ಗುರು ಪರಂಪರಾಮೃತದಿಂದ**

# ವೈಷ್ಣವ ಸಂಪ್ರದಾಯದ ಜೀವೋತ್ತಮ ಮಠ

ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠವು ದಾಕ್ಷಿಣಾತ್ಯ ಸಾರಸ್ವತರ ವೈಷ್ಣವ ಸಂಪ್ರದಾಯದವರ ಪುರಾತನ ಧರ್ಮಪೀಠವಾಗಿದೆ. ಈ ಪೀಠದ ಸ್ಥಾಪನೆ ಒಂದರ್ಥದಲ್ಲಿ ಬದರಿನಾಥದಲ್ಲಾಯಿತು. ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಫಲಿಮಾರು ಮಠದ ಶ್ರೀ ರಾಮಚಂದ್ರ ತೀರ್ಥರು ಬದರೀನಾರಾಯಣ ಯಾತ್ರೆಗೆ ಹೋದಾಗ ಆಕಸ್ಮಿಕ ಅಸ್ವಸ್ಥರಾದರು. ತಾವು ಚೇತರಿಸಿಕೊಂಡು ಉಡುಪಿಗೆ ಮುಟ್ಟುತ್ತೇವೆಂಬ ವಿಶ್ವಾಸ ಅವರಲ್ಲಿ ಉಳಿಯಲಿಲ್ಲ. ಅದರಿಂದ ಅವರು ಗೌಡಸಾರಸ್ವತ ಸಮಾಜದ ಮಾಧವ ಎಂಬ ವಟುವಿಗೆ ಶ್ರೀ ಶಾಲಿವಾಹನ ಶಕೆ 1397 ಚೈತ್ರ ಶುಕ್ಲ ದ್ವಿತೀಯೆಯಂದು ಸಂನ್ಯಾಸ ಆಶ್ರಮ ದೀಕ್ಷೆ ಕೊಡಲಾಯಿತು. ಅವರಿಗೆ ಶ್ರೀ ಮನ್ನಾರಾಯಣ ತೀರ್ಥರೆಂದು ಅಭಿಧಾನ ಮಾಡಲಾಯಿತು. ಶಾಲಿವಾಹನ ಶಕೆ 1439ರಲ್ಲಿ ಅವರು ವೃಂದಾವನಸ್ಥರಾದರು. ಅವರ ವೃಂದಾವನವು ಭಟ್ಕಳದಲ್ಲಿಯ ಗೋಪಿ ನದಿಯ ದಡದ ಮೇಲಿದ್ದು, ವೃಂದಾವನಕ್ಕೆ ನಿತ್ಯ ಪೂಜಾ ಅರ್ಚನೆಗಳು ನಡೆಯುತ್ತಲಿವೆ.

ತಮ್ಮ ಪೀಠಾಧಿಕಾರದ ನಲ್ವತ್ತೆರಡು ವರ್ಷಗಳ ಕಾಲಕೀರ್ದಿಯಲ್ಲಿ ಶ್ರೀ ನಾರಾಯಣ ತೀರ್ಥರು ಪ್ರಪ್ರಥಮವಾಗಿ ವಾರಣಾಸಿಯಲ್ಲಿ ಪಂಚಗಂಗಾ ಘಾಟದ ಮೇಲೆ ಧರ್ಮಪೀಠ ಸ್ಥಾಪಿಸಿದರು.

ಮುಂದೆ ಈ ಪೀಠವು ಸಂಪ್ರದಾಯದ ಆದ್ಯಮಠವೆಂದು ಹೆಸರಾಯಿತು. ಇತ್ತ ಶ್ರೀ ರಾಮಚಂದ್ರತೀರ್ಥರು ಗುಣಮುಖರಾಗಿ ಮರಳಿ ಬಂದ ಬಳಿಕ ಒಬ್ಬ ಸಾರಸ್ವತ ಸಮಾಜದ ಸಂನ್ಯಾಸಿಯನ್ನು ಫಲಿಮಾರು ಮಠದ ಉತ್ತರಾಧಿಕಾರಿಯಾಗಿ ಸ್ವೀಕರಿಸಲು ಯುಕ್ತವೇ ಎಂಬ ಚರ್ಚೆ ಪ್ರಾರಂಭವಾಯಿತು. ಆಗ ಗುರುವರ್ಯರ ಅನುಮತಿ ಯಿಂದ ಶ್ರೀ ನಾರಾಯಣ ತೀರ್ಥರು ಭಟ್ಕಳದಲ್ಲಿ ಒಂದು ಸ್ವತಂತ್ರ ಧರ್ಮಪೀಠ ಸ್ಥಾಪಿಸಿ ಧರ್ಮಪ್ರಚಾರ ಮತ್ತು ಸಮಾಜ ಸಂಘಟನಾ ಕಾರ್ಯದಲ್ಲಿ ತೊಡಗಿದರು.

ಮೊದಲು ಈ ಧರ್ಮಪೀಠದ ಸ್ಥಾಪನೆಯಾದರೂ ಬಿರುದಾವಳಿಯಲ್ಲಿ ವಾರಣಾಸಿ, ಇಲ್ಲವೆ ಭಟ್ಕಳ ಮಠದ ಉಲ್ಲೇಖದ ಬದಲು ಪರಂಪರೆಯ ಮೂರನೆಯ ಗುರುಸ್ವಾಮಿಗಳಾದ ಶ್ರೀ ಜೀವೋತ್ತಮ ತೀರ್ಥರು (ಆಶ್ರಮ ಸ್ವೀಕಾರ ಮಾಘ ಶುಕ್ಲ

ಚತುರ್ಥಿ ಶ್ರೀ ಶಕೆ 1439, ಮಹಾನಿರ್ವಾಣ ಭಾದ್ರಪದ ಶುಕ್ಲ ಪಂಚಮಿ ಶ್ರೀ ಶಕೆ 1510). ಸ್ಥಾಪಿಸಿದ ಗೋಕರ್ಣಮಠದ ಹೆಸರು ಪ್ರಪ್ರಥಮವಾಗಿ ಉಚ್ಚರಿಸಲಾಗುತ್ತದೆ. ಶ್ರೀ ಜೀವೋತ್ತಮ ತೀರ್ಥರು ಧರ್ಮಶಾಸ್ತ್ರ, ವೇದವೇದಾಂತ, ಆಧ್ಯಾತ್ಮಿಕ ವಿಷಯ ಗಳಲ್ಲಿ ಪ್ರಕಾಂಡ ಪಂಡಿತರಾಗಿದ್ದರು. ಅವರ ಪಾಂಡಿತ್ಯ, ಪ್ರತಿಭೆಗಳಿಂದ ಭಾರತದ ಧರ್ಮಪೀಠಗಳು ಅವರನ್ನು ಗೌರವದಿಂದ ಉಲ್ಲೇಖಿಸ ತೊಡಗಿದವು. ಯೋಗ ವಿದ್ಯೆಯಲ್ಲಿ ಅವರು ಪರಿಣತರಾಗಿದ್ದರು. ಯೋಗ ಸಾಧನೆಯಿಂದಾಗಿ ಅವರು ಕಠಿಣ ಪರಿಸ್ಥಿತಿಯಲ್ಲಿಯೂ ಸುಲಭ ಪರಿಹಾರೋಪಾಯ ಕಂಡು ಹಿಡಿಯುತ್ತಿದ್ದರು. ತಮ್ಮ ಸುದೀರ್ಘ ಕಾಲಾವಧಿಯಲ್ಲಿ ತೀರ್ಥಾಟನೆ ಮತ್ತು ಸಮಾಜ ಸಂಘಟನೆ ಮಾಡುತ್ತ ಎದುರಾದ ಸಮಸ್ಯೆಗಳನ್ನು ಜಾಣ್ಮೆಯಿಂದ ನಿವಾರಿಸುತ್ತ ಶ್ರೀ ಜೀವೋತ್ತಮ ತೀರ್ಥರು ಜನಮಾನಸದಲ್ಲಿ ಗೌರವಾದರಗಳನ್ನು ಪಡೆದರು. ಮಹಾಪಂಡಿತರಾದ ಶ್ರೀಗಳವರು ಆಸೇತು ಹಿಮಾಚಲ ಪಾದಯಾತ್ರೆ ಮಾಡಿ ಅಪಾರ ಅನುಭವಗಳಿಂದ ತಮ್ಮ ಜ್ಞಾನಕ್ಷಿತಿಜವನ್ನು ವಿಸ್ತರಿಸಿ ಮಠದ ಕೀರ್ತಿಪತಾಕೆಯನ್ನು ಬಾನೆತ್ತರಕ್ಕೆ ಹಾರಿಸಿದರು. ಯೋಗವಿದ್ಯೆ ಮತ್ತು ತಮ್ಮ ಪ್ರಾಸಾದಿಕ ವಾಣಿಯಿಂದ ಲೋಕಸೇವೆಗೈಯುತ್ತ ಸ್ವಾಧ್ಯಾಯದಿಂದ ಆಚರಣೆಯನ್ನು ಉನ್ನತಮಟ್ಟಕ್ಕೇರಿಸಿದರು.

ಮಠದ ವ್ಯವಹಾರಗಳನ್ನು ಅವರು ತಮ್ಮ ಪ್ರಿಯ ಶಿಷ್ಯರಾದ ಶ್ರೀಪುರುಷೋತ್ತಮ ತೀರ್ಥರಿಗೆ ಒಪ್ಪಿಸಿದರು. ಗುರುಶಿಷ್ಯರ ಈ ಅಪ್ರತಿಮ ಜೋಡಿ ಶಿಷ್ಯಪರಿವಾರಕ್ಕೆ ದೀರ್ಘಕಾಲ ಸುಖ-ಸಮಾಧಾನ ಒದಗಿಸಿತು. ಶ್ರೀ ಪುರುಷೋತ್ತಮ ತೀರ್ಥರು ಸ್ವಾಧ್ಯಾಯವನ್ನು ಗುರುಪರಂಪರೆಯಂತೆ ಉತ್ತಮ ರೀತಿಯಲ್ಲಿ ನಡೆಸು ತ್ತಿದ್ದರು. ಅವರು ಕರ್ಮಕಾಂಡದ ಬಗ್ಗೆ ನಿಷ್ಠಾವಂತರಾಗಿದ್ದರು. ಸಮಾಜ ವರ್ಗದ ಶ್ರೌತ, ಸ್ಮಾರ್ತ ಕಾರ್ಯಗಳು ವಿಧಿಪೂರ್ವಕ ನಡೆಯಬೇಕೆಂಬುದು ಅವರ ಉದ್ದೇಶ ವಾಗಿತ್ತು. ಅದಕ್ಕೆ ಅವರು **ಕರ್ಮಸಿದ್ಧಾಂತ** ಎಂಬ ಗ್ರಂಥ ಬರೆದರು. ಅವರ **ಸಂನ್ಯಾಸ ಪದ್ಧತಿ** ಎಂಬ ಎರಡನೆಯ ಗ್ರಂಥವೂ ಅವರ ವಿದ್ವತ್ತು ಮತ್ತು ವ್ಯಾವಹಾರಿಕ ದೃಷ್ಟಿಕೋನವನ್ನು ಎತ್ತಿ ತೋರಿಸುತ್ತವೆ. ಶ್ರೀ ಜೀವೋತ್ತಮ ತೀರ್ಥರ ನಂತರ ಅವರು ಭಾದ್ರಪದ ಮಾಸದಲ್ಲಿ ಗುರುಪೀಠವನ್ನಲಂಕರಿಸಿದರು. ಕೇವಲ ಮೂರು ತಿಂಗಳಲ್ಲಿ ಮಾರ್ಗಶೀರ್ಷ ಕೃಷ್ಣ ದ್ವಿತೀಯೆಯಂದು ಅವರು ವೃಂದಾವನಸ್ಥರಾದರು. ಗುರುಗಳ ವ್ಯಕ್ತಿತ್ವದಲ್ಲಿ ತಮ್ಮ ವ್ಯಕ್ತಿತ್ವವನ್ನು ಸಮಾವೇಶಗೊಳಿಸುವ ಹೃದ್ಯ ಹಾಗೂ ಅನುಕರಣೀಯ ರೂಢಿಯನ್ನು ಶ್ರೀ ವಾಸುದೇವತೀರ್ಥರು ಹಾಕಿ ಕೊಟ್ಟಿದ್ದರು. ಅದೇ ರೂಢಿಯನ್ನು ಶ್ರೀ ಪುರುಷೋತ್ತಮತೀರ್ಥರೂ ಮುಂದುವರಿಸಿದರು. ಇಂದಿಗೂ ಮಠದ

ಇತಿಹಾಸದಲ್ಲಿ ಇಂತಹ ಅಪೂರ್ವ ಗುರುಶಿಷ್ಯರ ಜೋಡಿಯ ನಿದರ್ಶನಗಳು ದಾಖಲೆಯಾಗಿ ಉಳಿದಿವೆ.

ಪರ್ತಗಾಳಿಯಲ್ಲಿ ಮಠಕಟ್ಟುವ ಮಹತ್ಕಾರ್ಯ ಗುರುಪರಂಪರೆಯ ಆರನೆಯ ಯತಿವರ್ಯರಾದ ಶ್ರೀ ರಾಮಚಂದ್ರತೀರ್ಥರು ಮಾಡಿದ್ದರೂ ತಾವು ಗೋಮಂತಕ ಯಾತ್ರೆಯಲ್ಲಿದ್ದಾಗ ಶ್ರೀ ಜೀವೋತ್ತಮತೀರ್ಥರು ಪೈಂಗಿಣಿ ಎಂಬಲ್ಲಿ ತಲುಪಿದ್ದರು. ಪರಶುರಾಮ ಭೂಮಿಯ ಸಂಚಾರ ಮಾಡುತ್ತಿರುವಾಗ ಗೋವೆಯ ಕಡೆ ಹೋಗುವ ಕಾಲುದಾರಿ ಕುಶಾವತಿ ನದಿಯ ದಂಡೆಯ ಮೇಲಿಂದ ಹಾಯ್ದು ಹೋಗುತ್ತಿತ್ತು. ಆಗ ಈಶಾನ್ಯಪ್ಲವಾ ಕುಶಾವತಿ ತೀರ್ಥದ ದರ್ಶನ ಅವರಿಗೆ ಆಯಿತು. ಅಲ್ಲಿ ಅವರು ಮುಖ ಪ್ರಕ್ಷಾಲನ ಮಾಡಿ ಶ್ರೀ ಪರಶುರಾಮ ದರ್ಶನಕ್ಕೆ ಹೋದರು. ಅನಂತರ ಅವರು ಗೋಕರ್ಣತೀರ್ಥ ತಲುಪಿದರು ಎಂಬುದು ದಫ್ತರಗಳ ದಾಖಲೆಯಿಂದ ತಿಳಿಯುತ್ತದೆ. ಶ್ರೀ ಶಕೆ 1578ರಲ್ಲಿ (1656 ಇಸ್ವಿ) ಈಶಾನ್ಯಪ್ಲವಾ ಕುಶಾವತೀ ನದಿಯ ತೀರದಲ್ಲಿ ಮಠ ಕಟ್ಟಿಸುವ ಪ್ರೇರಣೆ ಶ್ರೀರಾಮಚಂದ್ರ ತೀರ್ಥರಿಗೆ ಮೇಲಿನ ದಾಖಲೆಯ ಸಂದರ್ಭದಲ್ಲಾಗಿರಬೇಕು.

ಈ ಹಿನ್ನೆಲೆಯಲ್ಲಿ ಮಠದ ನಾಮಾಭಿಧಾನದಲ್ಲಿ ಗೋಕರ್ಣ ಮತ್ತು ಪರ್ತಗಾಳಿ ಎರಡು ಮಠಗಳ ಉಲ್ಲೇಖವಾದ ನಂತರ ಶ್ರೀ ಜೀವೋತ್ತಮತೀರ್ಥರ ಸ್ಮರಣೆ ಮಾಡದಿದ್ದಲ್ಲಿ ಮಠದ ನಾಮಾವಳಿ ಪೂರ್ಣವಾಗುವುದಿಲ್ಲವೆಂಬ ಭಾವನೆಯಿಂದ ಶ್ರೀರಾಮಚಂದ್ರ ತೀರ್ಥರು ಮಠದ ಮುಖ್ಯಕೇಂದ್ರ ಪರ್ತಗಾಳಿ ಎಂದು ಘೋಷಿಸು ವಾಗ ಮಠದ ಬಿರುದಾವಳಿಯಲ್ಲಿ ಯುಗಪ್ರವರ್ತಕ ಶ್ರೀ ಜೀವೋತ್ತಮ ತೀರ್ಥರ ಹೆಸರನ್ನು ಸೇರಿಸಿದರು.

ಇಂದು ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠ ಎಂಬ ಧರ್ಮಪೀಠವು ಭಾರತದಲ್ಲಿಯ ಗೌಡಸಾರಸ್ವತ ಬ್ರಾಹ್ಮಣ ಸಂಪ್ರದಾಯದ ಆದ್ಯ ಧರ್ಮ ಪೀಠವಾಗಿದೆ. ಈ ಮಠದ ಮುಖ್ಯಕಾರ್ಯಾಲಯ ಗೋವೆ ರಾಜ್ಯದ ಕಾಣಕೋಣ ತಾಲೂಕಿನ ಪರ್ತಗಾಳಿಯಲ್ಲಿ ಸಹ್ಯಾದ್ರಿ ಪರ್ವತದ ಮಡಿಲಲ್ಲಿ ಕುಶಾವತೀ ನದಿ ಈಶಾನ್ಯ ದಿಕ್ಕಿಗೆ ಹೊರಳುವಲ್ಲಿ ಇದ್ದರೂ ಈ ಪೀಠದ ಪ್ರಥಮ ಮಠ ವಾರಣಾಸಿ ತೀರ್ಥಕ್ಷೇತ್ರದಲ್ಲಿ ಪಂಚಗಂಗಾ ಘಾಟದ ಮೇಲೆ ನಿಂತಿದೆ.

ಈ ಮಠದ ನಾಮಾವಲಿಯಲ್ಲಿ ಗೋಕರ್ಣ ಉಲ್ಲೇಖವಿರುವ ಕಾರಣ ಬೇರೆ. ಪ್ರಾಚೀನ ಕಾಲದಿಂದಲೂ ದಕ್ಷಿಣ ಭಾರತದಲ್ಲಿ ಗೋಕರ್ಣವು ಪ್ರಮುಖ

ತೀರ್ಥವೆಂದು ಹೆಸರು ಪಡೆದಿದೆ. ಅದಕ್ಕೆ ಸಂಬಂಧಿಸಿ ಅಸಂಖ್ಯ ಪುರಾಣ ಕಥೆಗಳಿವೆ. ಆದರಿಂದ ದೇಶದಲ್ಲಿನ ಶ್ರದ್ಧಾಳು ಭಕ್ತರಿಗೆ ಅದೊಂದು ಪ್ರಮುಖ ತೀರ್ಥಕ್ಷೇತ್ರ ವಾಗಿದೆ. ಅಲ್ಲಿ ಮಠಪರಂಪರೆಯ ಮೂರನೆಯ ಗುರುಗಳಾದ ಶ್ರೀ ಜೀವೋತ್ತಮ ತೀರ್ಥರು ಮಠ ಸ್ಥಾಪಿಸಿ ಗೌಡಸಾರಸ್ವತ ಬ್ರಾಹ್ಮಣಾಂತರ್ಗತ ವೈಷ್ಣವ ಸಂಪ್ರದಾಯದ ಆದ್ಯಪೀಠ ಶ್ರೀ ಗೋಕರ್ಣ ಮಠವೆಂಬ ಹೆಸರಿನಿಂದ ಸ್ವಕೀಯ ಹಾಗೂ ಇತರ ಸಮಾಜಗಳಲ್ಲಿ ಮಾನ್ಯತೆ ಪಡೆದರು. ಮುಂದೆ ಪರಂಪರೆಯೊಳಗಿನ ಆರನೆಯ ಗುರುವರ್ಯರಾದ ಶ್ರೀ ರಾಮಚಂದ್ರತೀರ್ಥರು ಒಂದು ವಿಚಿತ್ರ ಪರಿಸ್ಥಿತಿಯಿಂದಾಗಿ ಪರ್ತಗಾಳಿಯಲ್ಲಿ ಮಠ ಸ್ಥಾಪಿಸಬೇಕಾಯಿತು.

ವಾರಣಾಸಿ ಕ್ಷೇತ್ರದಲ್ಲಿ ಈಶಾನ್ಯವಾಹಿನಿ ಗಂಗಾತೀರದಲ್ಲಿ ಶ್ರೀಮಠ ಸಂಸ್ಥಾಪ ನಾಚಾರ್ಯ ಶ್ರೀ ನಾರಾಯಣತೀರ್ಥರು ಕಟ್ಟಿಸಿದ ಮಠದ ಅಧೀನತ್ವವು ವಿಧಿವಶಾತ್ ಒಂದು ಕುಟುಂಬದ ಕೈಸೇರಿತು. ಆ ಕುಟುಂಬದವರು ಅದು ತಮ್ಮ ವೈಯಕ್ತಿಕ ಆಸ್ತಿಯೆಂದು ದಾವೆ ಹೂಡಿದರು. ಆ ಪ್ರಕರಣ ತತ್ಕಾಲೀನ ಅರಸೊತ್ತಿಗೆಯ ಕಾಜಿ ಯವರ ಕಡೆಗೆ ನ್ಯಾಯ ಪಡೆಯುವುದಕ್ಕಾಗಿ ದಾಖಲಾಗಿತ್ತು. ಆದ್ದರಿಂದ ಆ ಮಠವು ಕೈತಪ್ಪಿ ಹೋಗಬಹುದೆಂಬ ವಿವಂಚನೆಯಿಂದ ಪರಶುರಾಮ ಭೂಮಿಯಲ್ಲಿ ಹೊಸ ಮಠ ಕಟ್ಟಿಸುವ ನಿರ್ಧಾರ ಶ್ರೀ ರಾಮಚಂದ್ರತೀರ್ಥರು ಮಾಡಿದರು. ಅದರಿಂದ ಜನ ವಸತಿಯಿಂದ ದೂರವಿರುವ ಈಶಾನ್ಯವಾಹಿನಿ ಕುಶಾವತೀ ನದಿ ತೀರವನ್ನು ಆಯ್ಕೆ ಮಾಡಿದರು. ಪರ್ತಗಾಳಿಯನ್ನು ಧರ್ಮಪೀಠದ ಮುಖ್ಯ ಕೇಂದ್ರವೆಂದು ಘೋಷಿಸಿ ನಾಮಾವಳಿಯಲ್ಲಿ ಪರ್ತಗಾಳಿಯ ಸಮಾವೇಶ ಮಾಡುವ ಸಂದರ್ಭದಲ್ಲಿ ದೇದೀಪ್ಯಮಾನ ತಾರೆಯಂತೆ ಮಿನುಗುವ ಸ್ವಾಮೀಜೀಯವರ ಪುಣ್ಯದಿಂದಾಗಿ ಮಠದ ವೈಭವ, ಗೌರವಗಳು ಹೆಚ್ಚಿದ್ದವೊ, ಯಾರ ಪುಣ್ಯ ಪ್ರಭಾವ ಕೇವಲ ಅನುಯಾಯಿ ವರ್ಗದವರಿಗಷ್ಟೇ ಸೀಮಿತವಾಗಿರದೆ ಇತರ ಸಮಾಜ, ಧರ್ಮಪೀಠಗಳ ಮೇಲೆ ಬಿದ್ದಿತ್ತೊ ಅಂತಹ ಜೀವೋತ್ತಮತೀರ್ಥರ ಹೆಸರನ್ನು ಶ್ರೀಮಠದ ನಾಮಾವಳಿಯಲ್ಲಿ ಸೇರಿಸಿದರು.

ಶ್ರೀ ಜೀವೋತ್ತಮ ತೀರ್ಥರ ಕಾಲಾವಧಿಯಲ್ಲಿ ಸಾರಸ್ವತ ಸಮಾಜದ ಪುಣ್ಯ ಭೂಮಿಯಾಗಿರುವ ಗೋಮಂತಕ ರಾಜ್ಯದಲ್ಲಿ ಪ್ರಚಂಡ ಏರುಪೇರುಗಳಾದವು. ಪರಶುರಾಮ ಸೃಷ್ಟಿಯಾದ ನಂತರ ಸಾರಸ್ವತ ಸಮಾಜದವರು ಸ್ಥಳಾಂತರ ಮಾಡುತ್ತ ಬಂದಿದ್ದರು. ಈ ಸಮಾಜದವರು ಎಲ್ಲೆಲ್ಲಿ ತಲುಪಿದರೊ ಅಲ್ಲಿಗೆ ತಮ್ಮ

ಕುಲದೇವತೆಗಳನ್ನು ಕೊಂಡೊಯ್ದರು. ಹೊಸ ಸ್ಥಳದಲ್ಲಿ ದೇವಾಲಯವನ್ನು ಕಟ್ಟಿಸಿ ಕುಲದೇವತೆಯನ್ನು ವಿಧಿಪೂರ್ವಕ ಪ್ರತಿಷ್ಠಾಪಿಸಿದರು. ಅದರ ಸುತ್ತ ಮುತ್ತ ಇದ್ದ ಭೂಮಿಯನ್ನು ಬೆವರು ಸುರಿಸಿ ಕೃಷಿ ಮಾಡುತ್ತಿದ್ದರು. ಭಗವಂತನು ನಿರ್ಮಿಸಿದ ಸಕಲ ಚರಾಚರ ಸೃಷ್ಟಿಯೊಂದಿಗೆ ಪ್ರೇಮ, ಸೌಹಾರ್ದಗಳನ್ನು ಬೆಳೆಯಿಸಿಕೊಂಡು ಜೀವಿಸುತ್ತಿದ್ದರು.

ದೇವಾಲಯಗಳು ಧರ್ಮ, ಸಂಸ್ಕೃತಿ, ಅಧ್ಯಾತ್ಮದ ಕೇಂದ್ರಗಳಾದವು. ಜ್ಯೋತಿಷ್ಯ, ಆಯುರ್ವೇದ, ಯೋಗಶಾಸ್ತ್ರವನ್ನು ಅಭ್ಯಸಿಸಿದ ದೇವಾಲಯದ ವಿದ್ವಾಂಸರಿಂದ ಸಮಾಜಕ್ಕೆ ಮಾರ್ಗದರ್ಶನ ಸಿಕ್ಕಿತು. ಸಾಮಾಜಿಕ, ಧಾರ್ಮಿಕ ಜೀವನದ ನಿಯಮ, ವಿಧಿ ನಿಷೇಧ, ಶೌಚ-ಅಶೌಚಗಳೆಂದರೇನು ಎಂಬುದನ್ನು ಅರ್ಚಕ ಮಂಡಳಿ ಸಮಾಜಕ್ಕೆ ತಿಳಿಸಿಕೊಡುತ್ತಿತ್ತು. ಕಥೆ, ಕೀರ್ತನೆ, ನಾಟ್ಯ, ನರ್ತನ, ಉತ್ಸವ ಪ್ರವಚನಗಳ ಮೂಲಕ ಸಮಾಜ ಪ್ರಬೋಧನಾಕಾರ್ಯ ದೇವಾಲಯದ ಪ್ರಾಂಗಣದಲ್ಲಿ ನಡೆಯುವಂತಾಯಿತು. ಮುದ್ರಣ ವ್ಯವಸ್ಥೆಯಿಲ್ಲದಿದ್ದರೂ ವಾಚನ-ಶ್ರವಣಗಳು ಅವ್ಯಾಹತವಾಗಿ ನಡೆಯುತ್ತಿದ್ದವು.

ಸಮಾಜದ ಸ್ಥಿರತೆ ಅಭಿವೃದ್ಧಿಯಾದಂತೆ, ದೇವಾಲಯಗಳು ಸಂಸ್ಕೃತಿ ಮತ್ತು ಸಮಾಜ ಸಮ್ಮೇಲನಗಳ ಕೇಂದ್ರಗಳಾದವು. ಋತುಚಕ್ರಕ್ಕೆ ಸುಸಂಗತವಾದ ಹಬ್ಬ-ಉತ್ಸವಗಳು ನಡೆಯತೊಡಗಿದವು. ಶ್ರಮಪಟ್ಟು ಬೆಳೆಸಿದ, ನಿರ್ಮಿಸಿದ ವಸ್ತುಗಳನ್ನು ಕೃಷ್ಣಾರ್ಪಣೆ ಗೈದು ಪ್ರಸಾದ ರೂಪದಿಂದ ಸ್ವೀಕರಿಸುವ ಪ್ರಥೆ ಪ್ರಾರಂಭವಾಯಿತು. ಊರಲ್ಲಿ ಸ್ನೇಹ-ಸೌಹಾರ್ದವಿತ್ತು. ಸಹಕಾರಿ ಭಾವನೆಯಿತ್ತು.

ಸಾರಸ್ವತ ಸಮಾಜದ ಆದ್ಯ ವಸಾಹತು ಸಾಸಷ್ಟಿ ಎಂಬ ಹೆಸರಿನಿಂದ ಖ್ಯಾತವಾದ ಅರ್ವತ್ತಾರು ಊರುಗಳ ಸಮೂಹ. ಈ ಬಗ್ಗೆ ಇತಿಹಾಸಕಾರರಲ್ಲಿ ಮತೈಕ್ಯ ಉಂಟು. ಅನಂತರ ಸಾರಸ್ವತ ಸಮಾಜದವರು ತಿಸವಾಡಿಯ ಮೂವತ್ತು ಊರುಗಳಲ್ಲಿ ವಸಾಹತು ಸ್ಥಾಪಿಸಿದರು. ಅನಂತರ ಬಂದ ಸಮಾಜ ಬಾಂಧವರು ಬಾರದೇಶ, ಪೆಡಣೆ, ಕುಡಾಳ ಮೊದಲಾದ ಭಾಗಗಳಲ್ಲಿ ತಮ್ಮ ವಸಾಹತು ಸ್ಥಾಪಿಸಿದರು. ಹೀಗೆ ಮೆಲ್ಲ ಮೆಲ್ಲನೆ ಪರಶುರಾಮ ನಿರ್ಮಿತ ಸಪ್ತಕೊಂಕಣದಲ್ಲಿಯ ಮಹಾಸಪ್ತಮದಲ್ಲಿ ಸಾರಸ್ವತ ಸಮಾಜವು ಸ್ಥಿರವಾಯಿತು. ಭೌಗೋಲಿಕ ಅಂತರವಿದ್ದರೂ ಎಲ್ಲೆಡೆ ಸಮಾಜದ ಆದರ್ಶ ನಿಯಮಗಳು ಸಮಾನವಾಗಿದ್ದು ಕೃಷಿ ಮತ್ತು ಸಂಸ್ಕೃತಿಯ ವಿಕಾಸದಿಂದ ಊರುಗಳು ಸಮೃದ್ಧವಾದವು.

ಸ್ಥೈರ್ಯದ ಜೊತೆಗೆ ಮನವಿಸ್ತಾರಗೊಂಡಿತು. ಸಾರಸ್ವತ ಸಮಾಜದವರು ಗ್ರಾಮಸಂಸ್ಥೆ ಎಂಬ ಇನ್ನೊಂದು ಸಂಸ್ಥೆಯನ್ನು ಕಟ್ಟಿಕೊಂಡರು. ಈ ಗ್ರಾಮ ಸಂಸ್ಥೆಯ ರಚನೆ ಕುಲದೇವತೆಯ ತಳಹದಿಯ ಮೇಲೆ ಆಯಿತು. ಈ ಸಂಸ್ಥೆಗೆ ಗಾಂವಕಾರಿ ಅಥವಾ ಗ್ರಾಮಸಂಸ್ಥೆ ಎಂದು ಹೆಸರಿಡಲಾಯಿತು. ಮುಂದೆ ಪೋರ್ಚುಗೀಜ ಆಡಳಿತ ದವರು ಕೊಮುನಿದಾದ ಎಂದು ಸಂಬೋಧಿಸ ತೊಡಗಿದರು. ಈಗಲೂ ಈ ಹೆಸರು ಪ್ರಚಲಿತವಿದೆ. ದೇವಾಲಯದ ಸಭಾಸದರನ್ನು ಕುಳಾವಿ ಅಥವಾ ಮಹಾಜನ ಎಂದು ಸಂಬೋಧಿಸುತ್ತಾರೆ. ಇವರೇ ಆದ್ಯ ಸಭಾಸದರು ಮತ್ತು ಗ್ರಾಮಸಂಸ್ಥೆಯ ಸಭಾ ಸದರನ್ನು ಗಾಂವಕರ ಎಂದು ಕರೆಯುತಿದ್ದರು.

ಈ ಎರಡೂ ಸಂಸ್ಥೆಗಳ ರಚನೆಯಲ್ಲಿ ಬಹಳಷ್ಟು ಸಾಮ್ಯವಿದೆ. ದೇವಾಲಯ ಗಳು ಜನರ ಧಾರ್ಮಿಕ, ಸಾಂಸ್ಕೃತಿಕ, ಅವಶ್ಯಕತೆಗಳನ್ನು ಪೂರೈಸಿದರೆ ಗ್ರಾಮಸಂಸ್ಥೆಯು ಕೃಷಿ, ಸಮಾಜಕಲ್ಯಾಣ ಮತ್ತು ಇತರ ವ್ಯವಹಾರಗಳನ್ನು ನೋಡಿಕೊಳ್ಳುತ್ತದೆ. ನ್ಯಾಯದಾನದ ಪದ್ಧತಿ ಕೂಡ ಬೇರೆಯಾಗಿತ್ತು. ಪ್ರತಿಯೊಂದು ಊರಿನಲ್ಲಿ ಹತ್ತು ಸಮಸ್ತರೆಂದು ಗುರುತಿಸುವ ಒಂದು ಆಡಳಿತವಿತ್ತು. ಆ ಹತ್ತುಜನರ ಕೂಟ ದೇವಾಲಯದಲ್ಲಿದ್ದು ಗ್ರಾಮಸ್ಥರ ದೂರು, ಸೂಚನೆಗಳ ಕುರಿತು ನಿರ್ಧಾರ ಮಾಡುತ್ತಿತ್ತು. ದೇವ ಸಾನ್ನಿಧ್ಯದಲ್ಲಿ ಪ್ರಮಾಣ ಪೂರ್ವಕ ಮಾಡಿದ ನಿವೇದನೆಗಳು ಪ್ರಮಾಣಭೂತ ಎಂದು ತಿಳಿಯುತ್ತಿದ್ದರು. ತಪ್ಪಿತಸ್ಥರನ್ನು ಶಿಕ್ಷಿಸುವ ವ್ಯವಸ್ಥೆಯೂ ಇತ್ತು. ಅಪರಾಧದ ಸ್ವರೂಪಕ್ಕನುಗುಣವಾಗಿ ಭೂಮಿಯ ಅಗೆತ, ಕಟ್ಟಿಗೆ ಒಡೆಯುವುದು ಮೊದಲಾದ ಕೆಲಸದಿಂದ ಹಿಡಿದು ಗಡಿಪಾರು ಮಾಡುವವರೆಗಿನ ಶಿಕ್ಷೆಯ ಸ್ವರೂಪವಾಗಿತ್ತು.

ಎರಡೂ ಸಂಸ್ಥೆಗಳ ಸದಸ್ಯತ್ವವು ಊರಲ್ಲಿ ಸ್ಥಾಯಿತರಾದ, ಒಂದು ಆದ್ಯ ಕುಟುಂಬದಲ್ಲಿ ಜನ್ಮ ತಳೆದ ಗಂಡಸಿಗೆ ನಿಶ್ಚಿತ ವಯಸ್ಸು ಪೂರ್ಣವಾದ ಕೂಡಲೆ ಪ್ರಾಪ್ತವಾಗುತ್ತಿತ್ತು. ಸದಸ್ಯತ್ವ ಆನುವಂಶಿಕವಾಗಿರಲಿಲ್ಲ. ತಂದೆ ಮತ್ತು ಮಗ ಒಂದೇ ಸಮಯ ಉಭಯ ಸಂಸ್ಥೆಯಲ್ಲಿ ಸದಸ್ಯರಾಗಬಹುದಿತ್ತು. ಭೂಮಿ ಮತ್ತು ಇತರ ಸೊತ್ತುಗಳು ಸಾಮೂಹಿಕ ಒಡೆತನಕ್ಕೆ ಸೇರಿದ್ದೆಂದು ಮನ್ನಿಸುವುದೇ ಈ ಸಿದ್ಧಾಂತದ ಗುರಿಯಾಗಿತ್ತು. ಭೂಮಿ ಹಾಗೂ ಇತರ ಸೊತ್ತುಗಳನ್ನು ಹಸ್ತಾಂತರಿಸಲು ಮಾರಾಟ ಮಾಡಲು ಬಂದಿಯಿತ್ತು. ಸಾರಸ್ವತ ಸ್ಥಾಪಿತವಾದ ಪ್ರದೇಶದಲ್ಲಿ ಮೊದಲು ನೀರಿನ ವ್ಯವಸ್ಥೆ ಮಾಡಲಾಗಿತ್ತು. ನದಿ-ಹಳ್ಳಗಳು ಹತ್ತಿರದಲ್ಲಿಲ್ಲದಾಗ ಕೆರೆಗಳನ್ನು

ಕಟ್ಟಿಸಲಾಯಿತು. ಆ ನೀರನ್ನು ಹೊಲ-ತೋಟಗಳಿಗೂ, ಸಾಕು ಪ್ರಾಣಿಗಳಿಗೂ, ಉಪಯೋಗಿಸುವ ವ್ಯವಸ್ಥೆ ಒದಗಿಸಲಾಯಿತು. ಇಂಥ ಕೆರೆಗಳನ್ನು ಪ್ರತಿವರ್ಷ ಸ್ವಚ್ಛ ಮಾಡುವ ವ್ಯವಸ್ಥೆಯಿತ್ತು.

ಕುಟುಂಬದ ವಿಸ್ತಾರ ಹೊಂದಿದಂತೆ ಸಮಾಜದ ಅವಶ್ಯಕತೆಗಳು ಹೆಚ್ಚಾದವು. ಮನೆಯ ದೇವಾಲಯದಲ್ಲಿಯ ಕುಲದೇವತೆಗಳಿಗೆ ಮಧ್ಯಸ್ಥಳದಲ್ಲಿ ಪ್ರಶಸ್ತ ಮಂದಿರ ನಿರ್ಮಾಣವಾಯಿತು. ಆರಾಧ್ಯದೇವತೆ ಗ್ರಾಮದೇವತೆಗಳನ್ನು ಒಂದು ಅಥವಾ ಅದಕ್ಕಿಂತ ಹೆಚ್ಚು ಮಂದಿರಗಳಲ್ಲಿ ಪ್ರತಿಷ್ಠಾಪಿಸಲಾಯಿತು. ಊರಿನ ಭೂಗೋಲ ಮತ್ತು ವಾತಾವರಣ ನೋಡಿ ಊರ ರಚನೆಯಾಯಿತು. ತುಸು ಎತ್ತರದ ಬೆಟ್ಟದ ಭಾಗವನ್ನು ದನಗಳ ಮೇವಿಗಾಗಿ ಕಾದಿಡಲಾಗುತಿತ್ತು. ಈ ಗ್ರಾಮಸಂಸ್ಥೆಗಳ ಸ್ಥಾಪನೆ ಎಂದು ಆಯಿತು ಎಂಬ ಬಗ್ಗೆ ಇತಿಹಾಸದಲ್ಲಿ ದಾಖಲೆಗಳಿಲ್ಲ. ಆದರೆ ಕದಂಬರಾಜ ಜಯಕೇಶಿಯ ಆಳ್ವಿಕೆಯಲ್ಲಿನ ಒಂದು ದಾಖಲೆಯಲ್ಲಿ ಸಾರಸ್ವತ ಸಮಾಜ ಸ್ಥಾಪಿಸಿದ ಒಂದು ಗ್ರಾಮಸಂಸ್ಥೆಯ ಉಲ್ಲೇಖವಿದೆ. ಗೋವಾ ಸರಕಾರದ ಪುರಾತತ್ವ ಇಲಾಖೆ ಯಲ್ಲಿರುವ ಈ ದಾಖಲೆಯ ಮೇಲೆ 20 ಎಪ್ರಿಲ್ 1054 ಎಂಬ ತಾರೀಖು ಇದೆ.

ಗ್ರಾಮಸಂಸ್ಥೆ ಸಂಸ್ಥಾಪಕರ ಮಾನದಂಡವೆಂದರೆ ಕಾರ್ಯಶಕ್ತಿಯಾಗಿತ್ತು. ಆದರೆ ಅವರ ಅವಿಶ್ರಾಂತ ಪರಿಶ್ರಮದಿಂದಾಗಿ ಒಂದು ಕಾಲದಲ್ಲಿ ಗುಡ್ಡಗಾಡು ಎನಿಸಲ್ಪಟ್ಟ ಪ್ರದೇಶವೆಲ್ಲ ಮಂಗಲಮಯ ಪ್ರದೇಶವಾಗಿ ಮಾರ್ಪಟ್ಟಿತು. ಇದೇ ರೀತಿ ಅನೇಕ ಶತಕಗಳು ಕಳೆದುಹೋದವು. ಆಗಾಗ್ಗೆ ಕೆಲವು ಸಂಕಟಗಳು ಬಂದವು. ಕೆಲವೊಮ್ಮೆ ನೈಸರ್ಗಿಕ, ಕೆಲವೊಮ್ಮೆ ಯುದ್ಧದಂತಹ ಮಾನವ ನಿರ್ಮಿತ ಸಂಕಟಗಳು ಎದುರಾದವು. ಬಂದ ಪ್ರಸಂಗಗಳಿಗನುಸಾರವಾಗಿ ಸಮಾಜವು ಸುರಕ್ಷಿತ ಸ್ಥಳದಲ್ಲಿ ಆಶ್ರಯ ಪಡೆಯಿತು. ಸಂಕಟಗಳು ಕಳೆದ ಮೇಲೆ ತಮ್ಮ ತಮ್ಮ ಊರಿಗೆ ಮರಳಿ ಹೋದವು. ರಾಜಕೀಯ ಸ್ಥಿತ್ಯಂತರಗಳು ನಡೆಯುತ್ತಿದ್ದರೂ ಸಮಾಜ ಜೀವನ ಅಖಂಡವಾಗಿತ್ತು.

ಈ ವ್ಯವಸ್ಥೆಯಲ್ಲಿ ಒಂದು ಕೊರತೆಯಿತ್ತು. ಬಾಹ್ಯ ಆಕ್ರಮಣ ಪಡೆದು ಕೊಳ್ಳುವ ಶಕ್ತಿ ಅದಕ್ಕಿರಲಿಲ್ಲ. ಇದರಿಂದ 13ನೆಯ ಶತಮಾನದಲ್ಲಿ ಮುಸಲ್ಮಾನರು ದೇವಗಿರಿಯ ಯಾದವರನ್ನು ಸೋಲಿಸಿ ಗೋವೆಯಲ್ಲಿ ಪ್ರವೇಶಿಸಿ ಬಂಡಾಯ ಹೂಡಿದರು. 1367ರಲ್ಲಿ ವಿಜಯನಗರದ ಹರಿಹರರಾಯನು ಮುಖ್ಯಮಂತ್ರಿ ಮಾಧವಯಾನೆ ಮಾಧವಾಚಾರ್ಯರೊಂದಿಗೆ ಪ್ರಚಂಡ ಸೇನೆಯನ್ನು ಕಳುಹಿಸಿ

ಮುಸಲ್ಮಾನರನ್ನು ಹೊರದೂಡಿದನು. ಮುಂದೆ ಸಾರಸ್ವತರ ಉಧ್ವಸ್ಥಗೊಂಡ ಜೀವನ ಸರಾಗವಾಯಿತು. ಧ್ವಂಸವಾದ ದೇವಾಲಯಗಳನ್ನು ಹೊಸದಾಗಿ ಕಟ್ಟಿಸಲಾಯಿತು. ಸ್ವತಃ ಮಾಧವಾಚಾರ್ಯರು ಸಪ್ತಕೋಟೇಶ್ವರ ದೇವರ ಪುನಃ ಪ್ರತಿಷ್ಠಾಪನೆ ಮಾಡಿದರು. ಗೋಮಾಂಚಲ ತೀರ್ಥದ ಸುತ್ತಮುತ್ತಲಿನ ಭೂಮಿಯನ್ನು ಸಾರಸ್ವತರಿಗೆ ದಾನ ಕೊಟ್ಟರು. ಈ ದಾನದ ಪ್ರತಿಯೊಂದು ತೀರ್ಥಕ್ಕೆ ಮಾಧವತೀರ್ಥ ಎಂದು ಕರೆಯುತ್ತಾರೆ. ಸಾರಸ್ವತರ ಹೊಸ ವಸಾಹತಿಗೆ ಬ್ರಹ್ಮಪುರಿ ಎಂದು ಕರೆಯಲಾಯಿತು.

ಈ ಕಾಲಾವಧಿಯಲ್ಲಿ ಕೆಲವು ಸಾರಸ್ವತ ಕುಟುಂಬಗಳು ಗೋವೆಯ ಸುರಕ್ಷಿತ ಸ್ಥಳದಲ್ಲಿ ಆಶ್ರಯ ಪಡೆದಿದ್ದರೂ ಸಾಮೂಹಿಕ ಸ್ಥಳಾಂತರ ಪ್ರಕ್ರಿಯೆಯು ಪೋರ್ಚುಗೀಸರು ನಡೆಸಿದ ಧರ್ಮಾಂತರ ಆಂದೋಲನದ ನಂತರ ನಡೆಯಿತು.

ಮಾಧವ ಆಚಾರ್ಯರ ನಿಧನಾನಂತರ ಮುಸಲ್ಮಾನರು ಗೋವೆಯ ಮೇಲೆ ಮೇಲಿಂದ ಮೇಲೆ ದಾಳಿ ಮಾಡಿ ಹಿಂದು ಧರ್ಮೀಯರನ್ನು ಮುಖ್ಯವಾಗಿ ಸಾರಸ್ವತ ರನ್ನು ಪೀಡಿಸತೊಡಗಿದರು. ಆ ದಾಳಿಗಳು ಎಷ್ಟು ಪ್ರಬಲವಾಗಿದ್ದವೆಂದರೆ ಯಾವ ಬೆಲೆಯನ್ನು ತೆತ್ತಾದರೂ ಮುಕ್ತರಾಗಬೇಕೆಂಬ ಆಲೋಚನೆ ಮೂಡಿತ್ತು. ಪೋರ್ಚುಗೀಸರು ಬಂದು ಮುಸಲ್ಮಾನರನ್ನು ಹೊರಗಟ್ಟಿದ ಬಳಿಕ ಗೋವೆಯ ಹಿಂದುಗಳು ಆನಂದೋತ್ಸವ ಆಚರಿಸಿದರು. ಆಫೋಂಸದ ಅಲ್ಬುಕರ್ಕ ಎಂಬ ರೂಪದಲ್ಲಿ ದೇವರು ಒಬ್ಬ ರಕ್ಷಕನನ್ನು ಕಳುಹಿಸಿಕೊಟ್ಟ ಎಂದು ಹಿಂದುಗಳು ಅವನನ್ನು ಸ್ವಾಗತಿಸಿದರು.

ಅಲ್ಬುಕರ್ಕನ ಪ್ರಾರಂಭಿಕ ದಿನಗಳು ಸುಖದವಾಗಿದ್ದವು. ಆಕ್ರಮಿತ ಮುಸಲ್ಮಾನರನ್ನು ಹೊರಗಟ್ಟಿದ ಬಳಿಕ ಅವರು ಗ್ರಾಮಸಂಸ್ಥೆಗಳ ಜಮೀನು ಮತ್ತು ಇತರ ಸೊತ್ತುಗಳನ್ನು ಸಂಬಂಧಪಟ್ಟ ಆಯಾಯ ಗ್ರಾಮಸಂಸ್ಥೆಗಳಿಗೆ ಜಮೀನು ಮತ್ತು ಇತರ ಸೊತ್ತುಗಳನ್ನು ಒಪ್ಪಿಸಿದರು. ಸ್ಥಾನಿಕ ಸಂಸ್ಥೆಗಳ ನಡೆ-ನಡಾವಳಿಗಳನ್ನು ಮನ್ನಿಸುವ ಆಶ್ವಾಸನೆ ನೀಡಿದರು. ಧರ್ಮಸ್ವಾತಂತ್ರ್ಯವನ್ನು ಕಾಪಾಡುವ ಅಭಿವಚನ ನೀಡಿದ್ದರು.

ಆದರೆ ಈ ಆಶ್ವಾಸನೆಗಳನ್ನು ಪೋರ್ಚುಗೀಜರು ಕಾಲಾಂತರದಲ್ಲಿ ಸ್ವಾರ್ಥಪರ ರಾಗಿ ಮುರಿದರು. ಅವರ ಧೋರಣೆಗಳು ಬದಲಾದವು. ಕ್ರಿ. ಶ. 1540ರಿಂದ ಗೋವೆಯ ದುರ್ದಶಾಕಾಲ ಆರಂಭವಾಯಿತು.

1510ರಲ್ಲಿ ಪೋರ್ಚುಗೀಜರು ತಿಸವಾಡಿ ತಾಲೂಕನ್ನು ವಶಪಡಿಸಿಕೊಂಡರು. ನಂತರ ಬಾರದೇಶ, ಸಾಸಷ್ಟಿ, ಫೋಂಡಾ ತಾಲೂಕುಗಳನ್ನು ವಶಪಡಿಸಿಕೊಂಡರು. 1511ರಲ್ಲಿ ಮುಸಲ್ಮಾನರು ಈ ಪ್ರದೇಶಗಳನ್ನು ಆಕ್ರಮಿಸಿ ಪೋರ್ಚುಗೀಜರನ್ನು ಪರಾಭವಗೊಳಿಸಿದರು. 1530ರಲ್ಲಿ ವಿಜಯನಗರದ ರಾಜರು ಬಾರದೇಶ, ತಿಸವಾಡಿ, ಸಾಸಷ್ಟಿ ಮೂರು ತಾಲೂಕುಗಳನ್ನು ವಶಪಡಿಸಿಕೊಂಡು ಪೋರ್ಚುಗೀಜರಿಗೆ ದಾನವಾಗಿ ಕೊಟ್ಟರು. 1533ರಲ್ಲಿ ಪೋರ್ಚುಗೀಜರು ಆ ಪ್ರದೇಶ ಇನ್ನೊಮ್ಮೆ ಕಳೆದುಕೊಂಡರು. 1534ರಲ್ಲಿ ಬಾರದೇಶ, ಸಾಸಷ್ಟಿ, ತಿಸವಾಡಿ ತಾಲೂಕುಗಳು ಪೋರ್ಚುಗೀಜರ ಅಧಿಸತ್ತೆಗೆ ಒಳಪಟ್ಟವು. 1543ವರೆಗೆ ಚಿಕ್ಕಪುಟ್ಟ ಯುದ್ಧಗಳಾಗುತ್ತಲೇ ಇದ್ದವು. ಆದರೆ ಆ ಪ್ರದೇಶದ ಮೇಲಿನ ತಮ್ಮ ಅಧಿಕಾರ ಬಿಟ್ಟುಕೊಡಲಿಲ್ಲ. ಆ ಪ್ರದೇಶಕ್ಕೆ ಅವರು 'ಜುನ್ಯಾ ಕಾಬಿಜಾದೀ' ಎನ್ನುತ್ತಿದ್ದರು. (ಇಂದಿನ ಮುರಗಾಂವ್ ತಾಲೂಕು ಅಂದಿನ ಸಾಸಷ್ಟಿಯ ಒಂದು ಭಾಗವಾಗಿತ್ತು) ಗೋವೆಯ ಇತರ ಭಾಗಗಳು ಆ ಕಾಲದಲ್ಲಿ ಹಿಂದೂ ರಾಜರ ಅಧೀನದಲ್ಲಿತ್ತು.

1541ರಲ್ಲಿ ಗೋವೆಯಲ್ಲಿ ಧರ್ಮಾಂತರದ ಪಿಡುಗು ಪ್ರಾರಂಭವಾಯಿತು. ಪೋರ್ಚುಗೀಜ ರಾಜರ ಒಂದು ಆಜ್ಞೆಯ ಮೇರೆಗೆ ಗೋಮಂತಕೀಯರನ್ನು ಸಾಮ ದಾನ ಭೇದ ದಂಡಗಳನ್ನು ಉಪಯೋಗಿಸಿ ಕ್ರಿಸ್ತಿಯರನ್ನಾಗಿ ಮಾಡುವ ಪ್ರಕ್ರಿಯೆ ಪ್ರಾರಂಭವಾಯಿತು. ಆ ಸಮಯದಲ್ಲಿ ಯುರೋಪಿನ ಬಹುಸಂಖ್ಯಾತ ಕ್ರಿಸ್ತ ಮಿಷನರಿಗಳು ಗೋವೆಯಲ್ಲಿದ್ದರು.

ಗೋವೆಯ ಜನರು ಧರ್ಮ ಮತ್ತು ಸಂಸ್ಕೃತಿಯನ್ನು ಎಲ್ಲಿಯವರೆಗೆ ಬಿಡಲಾರರೋ ಗೋವೆಯಲ್ಲಿ ಪೋರ್ಚುಗೀಜರ ಅಧಿಕಾರ ಸ್ಥಿರವಾಗಿ ನಿಲ್ಲಲಾರದು ಎಂದು ಯುರೋಪಿನಿಂದ ಬಂದ ಮಿಷನರಿಗಳು ಪೋರ್ತುಗಾಲದ ರಾಜನಿಗೆ ತಿಳಿಸಿದರು. ಅದರಿಂದ ಆವಶ್ಯಕ ಉಪಾಯ ಯೋಜನೆ ಕೈಕೊಳ್ಳಲು ಪೋರ್ಚುಗಲ್ ಸರಕಾರ ಮಿಷನರಿಗಳಿಗೆ ಅಧಿಕಾರ ನೀಡಿತು.

ಕ್ರಿ.ಶ. 1540ರಿಂದ ಮಿಷನರಿಯವರ ಉಪದ್ರವ ಪ್ರಾರಂಭವಾಯಿತು. ದೇವ ಮಂದಿರಗಳನ್ನು ಧ್ವಂಸ ಮಾಡುವುದು. ಕೈಗೆ ಸಿಕ್ಕ ಜನರನ್ನು ಹಿಡಿದು ಧರ್ಮಾಂತರ ಗೊಳಿಸುವ ಕಾರ್ಯ ಪ್ರಾರಂಭಿಸಿದ್ದರಿಂದ ಜನರು ಗಾಬರಿಯಾಗಿ ಧರ್ಮ ಮತ್ತು ಸಂಸ್ಕೃತಿಯ ರಕ್ಷಣೆಗಾಗಿ ಸುರಕ್ಷಿತ ಪ್ರದೇಶಗಳಿಗೆ ಓಡಿಹೋದರು.

ಐತಿಹಾಸಿಕ ದೃಷ್ಟಿಯಿಂದ ವಿಜಯನಗರದ ಸಾಮ್ರಾಜ್ಯ ನಷ್ಟವಾಗುವ ಸಮಯ ಗೋವೆಯಲ್ಲಿ ಧರ್ಮಾಂತರದ ಪಿಡುಗು ಹೆಚ್ಚಾಗಿತ್ತು. ಹಿಂದು ಮಂದಿರಗಳು ಕಂಡಲ್ಲೆಲ್ಲ ಧ್ವಂಸ ಮಾಡುವ ಕಾರ್ಯ ಮಿಷನರಿಗಳು ನಡೆಸಿದ್ದರು.

## ಬಸರೂರದಲ್ಲಿಯ ವಸಾಹತು

ಬಸರೂರು ಪರಮಪೂಜ್ಯ ಶ್ರೀ ಜೀವೋತ್ತಮ ತೀರ್ಥರ ಊರು. ಶ್ರೀ ಸಂಸ್ಥಾನದ ಎರಡನೆಯ ಗುರುಗಳಾದ ಶ್ರೀವಾಸುದೇವ ತೀರ್ಥರು ಮಾಘಶುದ್ಧ ಚತುರ್ಥಿ ಶ್ರೀಶಕೆ 1439ರಂದು ಇವರಿಗೆ ಆಶ್ರಮ ದೀಕ್ಷೆಯನ್ನು ಕೊಟ್ಟರು. ಮುಂದೆ ಅವರು ತೀರ್ಥಾಟನೆಗೆ ಹೊರಟರು. ತೀರ್ಥಯಾತ್ರೆಯಲ್ಲಿರುವಾಗಲೇ ಪಂಢರಪುರದ ಭೀಮಾ ನದಿಯ ತೀರದಲ್ಲಿ ಅವರು ವೃಂದಾವನಸ್ಥರಾದರು. (ಶಕೆ 1439) ಅದೇ ವರ್ಷ ಶ್ರೀ ಜೀವೋತ್ತಮ ತೀರ್ಥರು ಪೀಠಾರೋಹಣ ಮಾಡಿದರು. ಅವರು ಸಂಪೂರ್ಣ ಎಪ್ಪತ್ತು ವರುಷಗಳ ಕಾಲ ಪೀಠವನ್ನಲಂಕರಿಸಿದ್ದರು. ಅವರ ಕಾಲಕೀರ್ದಿಯಲ್ಲಿ ಗೋಕರ್ಣ ಮಠದ ಇತಿಹಾಸದಲ್ಲಿ ಸುವರ್ಣಮಯ ಪ್ರಕರಣಗಳ ದಾಖಲೆಯಿದೆ. ಭಟ್ಕಳದ ಗೋಪಿ ನದಿಯ ತೀರದಲ್ಲಿ ಶ್ರೀಮಠ ಸಂಸ್ಥಾಪಕರಾದ ಶ್ರೀನಾರಾಯಣ ತೀರ್ಥರ ವೃಂದಾವನಕ್ಕೆ ಹೊಂದಿಕೊಂಡು ಶ್ರೀ ಜೀವೋತ್ತಮ ತೀರ್ಥರ ವೃಂದಾವನವಿದೆ. (ಭಾದ್ರಪದ ಶುಕ್ಲ ಪಂಚಮಿ ಶಕೆ 1510 ಇಸ್ವಿ 1588) ಬಸರೂರಿನಲ್ಲಿ ಸಾರಸ್ವತ ಜನರ ಆಗಮನದ ಬಗ್ಗೆ ಒಂದು ಆಖ್ಯಾಯಿಕೆ ಇದೆ. ಅದನ್ನು ಇಲ್ಲಿ ವಿವರಿಸುವ ಅಗತ್ಯವಿದೆ.

ಕ್ರಿ.ಶ. 1510ರಲ್ಲಿ ಗೋವೆಯಲ್ಲಿ ಪೋರ್ಚುಗೀಜರ ಆಗಮನವಾಯಿತು. ತಮ್ಮ ಸ್ಥಾನ ಸ್ಥಿರಗೊಳಿಸಲಿಕ್ಕೆ ಒಂದು ಕೈಯಲ್ಲಿ ಶಿಲುಬೆ ಇನ್ನೊಂದು ಕೈಯಲ್ಲಿ ಕೋವಿ ಹಿಡಿದು ಧರ್ಮಾಂತರ ಮಾಡತೊಡಗಿದರು. ಹಿಂದು ಮಂದಿರಗಳನ್ನು ನೆಲ ಸಮ ಮಾಡಿದರು. ಮತ್ತು ಹಿಂದುಗಳ ಸ್ವತ್ತನ್ನು ಕಸಿದುಕೊಂಡು ಧರ್ಮಾಂತರವಾದವರಿಗೆ ಆ ಭೂಮಿ-ಸೊತ್ತು ಹಂಚುವ ಕಾರ್ಯ ಮಾಡ ತೊಡಗಿದರು. ಈ ಆಕಸ್ಮಿಕ ಸಂಕಟದ ಸಮಯ ಗೋವೆಯಲ್ಲಿಯ ಸಾರಸ್ವತ ಸಮಾಜವು ಎಲ್ಲಿಗೆ ಹೋಗಬೇಕು. ಮುಂದೇನು ಮಾಡಬೇಕು ಎಂದು ತೋಚದೆ ಗೊಂದಲದಲ್ಲಿ ಬಿದ್ದಿತ್ತು. ಜಲಮಾರ್ಗದಿಂದ ಗೋವೆಯಿಂದ ದೂರ ಹೋಗುವುದು ಎಂದು ನಿಶ್ಚಯಿಸಿದರು. ಈ ರೀತಿ ನೂರಾರು ಕುಟುಂಬಗಳು ಕೇರಳ, ಮಹಾರಾಷ್ಟ್ರ, ಕರ್ನಾಟಕದ ಭಾಗಗಳನ್ನು ತಲುಪಿಸಿದರು. ದೋಣಿಯಲ್ಲಿ ಕುಳಿತು ಯೋಗ್ಯ ಆಶ್ರಯ ಸ್ಥಾನ ಸಿಗುವವರೆಗೆ ಅವರ ಪ್ರಯಾಣ

ಮುಂದುವರಿಯುತ್ತಿತ್ತು. ನೀರು ಮತ್ತು ಅನ್ನದ ಸಂಗ್ರಹ ಮುಗಿದ ಸ್ಥಳದಲ್ಲಿ ದಡಸೇರಿ ಅಲ್ಲಿಯೆ ನೆಲೆಸಿದರು.

ಧರ್ಮ, ಸಂಸ್ಕೃತಿಯ ರಕ್ಷಣೆಗಾಗಿ ಸಾಸಷ್ಟಿಯಲ್ಲಿಯ ಇತರ ಪರಿವಾರದಂತೆ ವರೇಣ್ಯಪುರದಲ್ಲಿದ್ದ ಒಂದು ಪರಿವಾರವೂ ಊರುಬಿಟ್ಟು ಹೊರಟಿತು. ಅವುಗಳಲ್ಲಿ ಒಂದು ಅರ್ಚಕ ಕುಟುಂಬ ಇತ್ತು. ಮೂವತ್ತು ದೋಣಿಗಳು ಸಾಮುದಾಯಿಕ ರೀತಿಯಲ್ಲಿ ಒಬ್ಬರಿಗೊಬ್ಬರು ಧೈರ್ಯ ನೀಡುತ್ತ ಅಥಾಂಗ ಸಾಗರದಲ್ಲಿ ಕೂಡಿದವು. ಮತ್ತು ಸುರಕ್ಷಿತ ಆಶ್ರಯ ಸ್ಥಾನದ ಶೋಧ ಮಾಡುತ್ತಾ ದಕ್ಷಿಣ ದಿಕ್ಕಿಗೆ ಹೊರಳಿದವು.

ಗೋವೆಯಿಂದ ಹೊರಟ ಮೂವತ್ತು ಕುಟುಂಬಗಳಲ್ಲಿ ಒಂದು ಸಮೂಹ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ಸಮೀಪ ಮುಟ್ಟಿದಾಗ ಸ್ಥಾನಿಕ ಜನರು ನಿರ್ವಾಸಿತರಿಗೆ ಆಶ್ರಯ ಕೊಡಲಿಲ್ಲ. 3-4 ದೋಣಿಗಳಲ್ಲಿದ್ದ ಆಬಾಲವೃದ್ಧ, ಸ್ತ್ರೀ ಪುರುಷರು ಹಸಿವು ನೀರಡಿಕೆಯಿಂದ ವ್ಯಾಕುಲಗೊಂಡಿದ್ದರು ದೋಣಿಯಲ್ಲಿ ಒಂದಿಷ್ಟು ನೀರೂ ಇರಲಿಲ್ಲ. ಅನ್ನದ ಕಾಳೂ ಇರಲಿಲ್ಲ. ಅವರಿಗೆ ಸ್ಥಾನಿಕ ಭಾಷೆಯೂ ಗೊತ್ತಿರಲಿಲ್ಲ. ದೋಣಿಗಳು ನದಿ ಸೇರಿದ್ದವು. ಅವುಗಳನ್ನು ಅಥಾಂಗ ಸಾಗರದತ್ತ ಹೊರಳಿಸುವುದೂ ಸಾಧ್ಯವಿರಲಿಲ್ಲ. ವಿನಾಶದ ಛಾಯೆ ಪಸರಿಸಿತ್ತು. ಕೆಲವು ಜನ ಅಸ್ವಸ್ಥರಿದ್ದರು. ಏನಾದರಾಗಲಿ ಎಂಬ ಹತಾಶೆಯಿಂದ ಜನರು ಬಸರೂರಿನ ದಡ ಸೇರಿದರು. ಅಲ್ಲಿಯೂ ಸ್ಥಾನಿಕ ಜನರು ಪ್ರತೀಕಾರ ಮಾಡುತ್ತಿದ್ದರು. ದಡದಲ್ಲಿ ಇಳಿಯಲು ವಿರೋಧಿಸುವ ಸ್ಥಾನಿಕ ಜನರ ಭಾಷೆ ತಿಳಿಯದ ಕಾರಣ ತೊಂದರೆಗಳು ಹೆಚ್ಚಾಗ ತೊಡಗಿದವು. ಕೊನೆಗೆ ರಾಜಿಯಾಯಿತು. ದಡದ ಪೂರ್ವಕ್ಕೆ ಸ್ಮಶಾನ ಭೂಮಿಯಿತ್ತು. ಅದರಾಚೆ ಘೋರ ಅರಣ್ಯವಿತ್ತು. ಗೋವೆಯ ಜನ ಇಷ್ಟಪಟ್ಟಲ್ಲಿ ಆ ಸ್ಥಳದಲ್ಲಿ ದೋಣಿಗಳನ್ನು ಇಡಬಹುದು ಎಂದು ತೀರ್ಮಾನಿಸಲಾಯಿತು. ಈ ನಿರ್ಣಯ ಒಪ್ಪಿ ಅಲ್ಲಿ ಜನರು ಇಳಿದರು. ಅನೇಕ ವಾರಗಳ ನಂತರ ಈ ಜನರ ಕಾಲುಗಳಿಗೆ ಭೂಮಾತೆಯ ಸ್ಪರ್ಶವಾಯಿತು.

ಘನಘೋರ ಅರಣ್ಯದಲ್ಲಿ ಹಿಂಸ್ರ ಪಶುಗಳ ಕರ್ಣಭೇದಿ ಗರ್ಜನೆಗಳು ಹಗಲಿಗೆ ಕೇಳಿಬರುತ್ತಿದ್ದವು. ರಾತ್ರಿಯ ಸಮಯ ಭಗವಂತನ ನಾಮಸ್ಮರಣೆಯ ಧೈರ್ಯದಿಂದಲೆ ಕಳೆಯಬೇಕಾಗಿತ್ತು. ಮೈಮೇಲಿನ ಬಂಗಾರ ಒಡವೆಗಳನ್ನು ಮಾರಾಟ ಮಾಡಿ ದೈನಿಕ ಅವಶ್ಯಕತೆಯನ್ನು ಪೂರೈಸಲು ಪೇಟೆಯ ಸಂಪರ್ಕವಾಗುತಿತ್ತು. ಈ ಕಷ್ಟದ ದಿನಗಳು ಮುಗಿಯಲಿವೆ ಎಂಬ ಧೈರ್ಯದಿಂದ ಜನ ಜೀವಿಸುತ್ತಿದ್ದರು.

ಒಬ್ಬಿಬ್ಬರು ಹುಲಿಗೆ ಬಲಿಯಾದ ಘಟನೆಗಳು ನಡೆದುವು. ಸಂಗ್ರಹದಲ್ಲಿದ್ದ ಬಂಗಾರ ಮುಗಿಯುತ್ತ ಬಂತು. ಮುಂದೇನು ಎಂಬ ವಿವಂಚನೆಯುಂಟಾಯಿತು. ಆಗ ಈ ಮಂಡಳಿಗೆ ಗುರುಗಳ ಸ್ಮರಣೆಯಾಯಿತು. ಒಂದು ಲಿಖಿತ ನಿವೇದನಾಪತ್ರವನ್ನು ತೆಗೆದುಕೊಂಡು ನಿರ್ವಾಸಿತರ ಶಿಷ್ಟ ಮಂಡಳವು ಶ್ರೀ ಸಂಸ್ಥಾನದ ಭಟ್ಕಳದಲ್ಲಿಯ ಮಠಕ್ಕೆ ಹೋಗಿ ಗುರುಸ್ವಾಮಿಗಳಿಗೆ ಸಾದರ ಪಡಿಸಿದರು. ಪೂಜ್ಯ ವಾಸುದೇವ ತೀರ್ಥ ಸ್ವಾಮಿಗಳು ಆಗ ಪೀಠಾಧಿಪತಿಗಳಾಗಿದ್ದಿರಬೇಕು. ಶಿಷ್ಯ ಪರಿವಾರದ ದುಃಖ ಕೇಳಿ ಗುರುಗಳ ಹೃದಯ ದ್ರವಿಸಿತು. ಅವರು ಬಸರೂರಿಗೆ ಬಂದರು. ಸ್ಥಾನಿಕ ಜನರು ಅವರನ್ನು ಹಾರ್ದಿಕವಾಗಿ ಸ್ವಾಗತಿಸಿದರು.

ಶ್ರೀ ವಾಸುದೇವ ತೀರ್ಥ ಸ್ವಾಮೀಜಿಯವರು ಬಸರೂರಿನ ತೀರ ತಲುಪಿದ ಕೂಡಲೇ ಸ್ಥಳಾಂತರಿತ ಸಾರಸ್ವತರನ್ನು ತಿರಸ್ಕರಿಸಿದ ಸ್ಥಾನಿಕ ಜನರು ಸ್ವಾಮೀಜಿಯವರ ದರ್ಶನದಿಂದ ನತಮಸ್ತಕರಾದರು. ಕಾವಿ ಬಟ್ಟೆ ಧರಿಸಿದ ಸಂನ್ಯಾಸಿಯ ತೇಜಸ್ಸಿನಿಂದ ಬೆರಗಾದ ಜನಸಮುದಾಯ ಉತ್ಸಾಹ ಪೂರ್ವಕವಾಗಿ ಅವರ ಚರಣ ಸ್ಪರ್ಶ ಮಾಡಿದರು.

ಸ್ಥಳಾಂತರಿತ ಸಾರಸ್ವತ ಸಮಾಜಕ್ಕೆ ಬಂದೊದಗಿದ ಐತಿಹಾಸಿಕ ಆಪತ್ತಿನ ಕಲ್ಪನೆಯನ್ನು ಸ್ವಾಮೀಜಿಯವರು ಸ್ಥಾನಿಕ ಸಮುದಾಯಕ್ಕೆ ತಿಳಿಸಿದರು. ಧರ್ಮ ಮತ್ತು ಸಂಸ್ಕೃತಿಯ ರಕ್ಷಣೆಗಾಗಿ ಈ ಜನರು ಆಶ್ರಯ ಹುಡುಕುತ್ತ ಬಂದಿದ್ದಾರೆ. ಭಗವಂತನ ಇಚ್ಛೆಯೂ ಅದೇ ಆಗಿರಬೇಕು. ಅವರಿಗೆ ಇಲ್ಲಿ ಆಶ್ರಯ ನೀಡಿದಲ್ಲಿ ಅವರು ಬೆವರು ಸುರಿಸಿ ದುಡಿದು ಭೂಮಿಯಿಂದ ಬಂಗಾರ ಹೊರಡಿಸಬಹುದು. ಊರು, ಸಮೃದ್ಧ, ವೃದ್ಧಿಂಗತ ಮಾಡುವರು. ಅವರಿರುವುದರಿಂದ ಸ್ಥಾನಿಕ ಜನರಿಗೆ ಯಾವ ತೊಂದರೆಯೂ ಆಗದು. ಈಗ ಅವರು ನಿಮ್ಮ ಕಣ್ಣಿಗೆ ಪೀಡೆಯಂತೆಯೆನಿಸಿದರೂ ಅವರು ಬಸರೂರಿನ ನೇತ್ರಾಂಜನವಾಗಲಿದ್ದಾರೆ. ಬಸ್ರೂರಿಗೆ ವೈಭವ ಮತ್ತು ಸಮೃದ್ಧಿ ಅವರು ತರುತ್ತಾರೆ. ಸಂನ್ಯಾಸಿಯ ಅಧಿಕಾರವಾಣಿಯಿಂದ ಬಸ್ರೂರು ವಾಸಿಗಳು ಅವಾಕ್ಕಾದರು. ತಮ್ಮ ಅಜ್ಞಾನ, ಅವಿಚಾರಗಳಿಂದ ಆಶ್ರಯ ಕೋರಿ ಬಂದ ಸಾರಸ್ವತರಿಗೆ ಅನ್ಯಾಯವಾದುದನ್ನು ಅರಿತುಕೊಂಡು ಕ್ಷಮೆಕೋರಿ ಅವರ ಪುನರ್ವಸತಿ ಗಾಗಿ ಸ್ಥಳಕೊಡುವುದಾಗಿ ಶ್ರೀ ವಾಸುದೇವ ತೀರ್ಥ ಸ್ವಾಮಿಗಳಿಗೆ ವಚನವಿತ್ತರು.

ಅಡವಿಯಲ್ಲಿದ್ದ ಸಮಾಜ ವೃಂದಕ್ಕೆ ಸುರಕ್ಷಿತ ಸ್ಥಳಗಳ ಸ್ಥಳಾಂತರಿಸುವ ಕಾರ್ಯಕ್ಕೆ ಆದ್ಯತೆ ನೀಡಲಾಯಿತು. ಶ್ರೀ ವಾಸುದೇವ ತೀರ್ಥ ಸ್ವಾಮಿಗಳು ಒಂದು

ಹಂಗಾಮಿ ಧರ್ಮಶಾಲೆಯನ್ನು ಕಟ್ಟಿಸಿಕೊಂಡರು. ಮತ್ತು ಸ್ಥಳಾಂತರಿತರಿಗೆ ಆಶ್ರಯಕೊಡಲಾಯಿತು. ಎಲ್ಲ ನಿಷ್ಠೆಯನ್ನು ಭೂಮಿಗೆ ಅರ್ಪಿಸಿ ಭೂಮಾತೆಯ ಸೇವೆ ಮಾಡಬೇಕು. ಯಾವ ಸಮಾಜದಲ್ಲಿ ನಾವು ವಾಸಿಸುತ್ತೇವೆಯೋ ಆ ಸಮಾಜದಲ್ಲಿ ಹಾಲು ಸಕ್ಕರೆಯಂತಿರಬೇಕು. ಎಂದು ಉಪದೇಶಿಸಿದರು. ದೇವರು ನಿಮ್ಮನ್ನು ಪರೀಕ್ಷಿಸುತ್ತಿದ್ದಾನೆ. ಈ ಪರೀಕ್ಷೆಯಲ್ಲಿ ನೀವು ತೇರ್ಗಡೆಯಾದರೆ ನಿಮಗೆ ಉಜ್ವಲ ಭವಿಷ್ಯವಿದೆ ಎಂಬ ಆಶೀರ್ವಾದ ಗುರುಮುಖದಿಂದ ಹೊರಬಂದಿತು.

ಮುಂದೆ ಹಾಗೆಯೇ ಆಯಿತು.

ಶ್ರೀ ಸ್ವಾಮೀಜಿಯವರು ಸ್ಥಳಾಂತರಗೊಂಡು ಬಂದ ಸಾರಸ್ವತ ಸಮಾಜ ದವರನ್ನು ಸಂಪರ್ಕ ಸಾಧಿಸಲು ಮುಂದಾದರು. ಸಮಾಜದ ದುಃಖ ನೋಡಿ ಅವರ ಮನಸ್ಸು ನೊಂದಿತ್ತು. ಶರೀರವೂ ಸೊರಗಿತ್ತು. ಯಾವುದೇ ಕ್ಷಣದಲ್ಲಿ ಇಹಲೋಕ ಯಾತ್ರೆ ಮುಗಿಸುವ ಸಮಯ ಬರಬಹುದೆಂದು ಗುರುಗಳಿಗೆ ಅನಿಸಿತ್ತು ಸಮಾಜವು ಸುಸ್ಥಿರವಾಗಿರಬೇಕು. ಪರಚಕ್ರದ ಛಾಯೆಯಿಂದ ದೂರವಿರಬೇಕು. ಸ್ವಧರ್ಮದ ತೇಜಸ್ಸು ಬೆಳೆಯಬೇಕು. ಅದರೊಂದಿಗೆ ಪೀಠದ ಪರಂಪರೆ ಅಬಾಧಿತವಾಗಿ ನಡೆಯ ಬೇಕು. ಇದೇ ಅವರ ಕನಸಾಗಿತ್ತು.

ಭೂತಲದಲ್ಲಿ ನಡೆಯುವ ದೇಹದ ಯಾತ್ರೆಯನ್ನು ಪೂರ್ಣಗೊಳಿಸುವ ಮೊದಲು ಇನ್ನೊಮ್ಮೆ ತೀರ್ಥಾಟನೆಗೈದು ಭೀಮಾತೀರದಲ್ಲಿದ್ದ ಶ್ರೀ ವಿಟ್ಠಲನ ದರ್ಶನ ಪಡೆದು ಸಮಾಜ ರಕ್ಷಣೆಗಾಗಿ ಪ್ರಾರ್ಥನೆ ಮಾಡಿ ವೈಕುಂಠ ಯಾತ್ರೆಗೆ ಸಿದ್ಧರಾಬೇಕು ಎಂಬುದು ಅವರ ಸಂಕಲ್ಪವಾಗಿತ್ತು.

ಬಸರೂರಿನಲ್ಲಿ ನೆಲೆಯೂರಿದ್ದ ಸಮಾಜದ ಸಂಕಟಗಳು ಪರಿಹಾರಗೊಳ್ಳ ದಿದ್ದರೂ ಅವರ ಭವಿಷ್ಯಕಾಲೀನ ದಾರಿ ಸುಗಮಗೊಂಡಿತ್ತು. ಅಲ್ಲಿಯ ವಾಸ್ತವ್ಯದಲ್ಲಿ ಗುರುಗಳ ಲಕ್ಷ್ಯ ಅಲ್ಲಿನ ಅರ್ಚಕ ಕುಟುಂಬದಲ್ಲಿಯ ಓರ್ವ ತೇಜಸ್ವಿ ಹುಡುಗನತ್ತ ಸೆಳೆಯುತ್ತಿತ್ತು. ಚಿಕ್ಕವಯಸ್ಸಿನ ಈ ಹುಡುಗನಿಂದ ಗೌಡಸಾರಸ್ವತ ಸಮಾಜದ ಪರಂಪರೆ ಉಜ್ವಲವಾಗುತ್ತದೆಯೆಂದು ಅವರಿಗೆ ಭಾಸವಾಗುತ್ತಿತ್ತು. ಸ್ವಾಮಿಜೀಯವರು ತಮ್ಮೊಡನೆ ಬಂದ ಪುರೋಹಿತರೊಂದಿಗೆ ಈ ವಿಷಯ ಚರ್ಚಿಸಿದರು. ಹುಡುಗನ ತಂದೆ-ತಾಯಿಗಳ ಸಮ್ಮತಿ ಪಡೆದರು. ಒಂದು ಶುಭ ಮುಹೂರ್ತದಲ್ಲಿ ವಟುವಿಗೆ ದೀಕ್ಷೆ ನೀಡಿ ವಾಯುದೇವರ ಅಪರ ಹೆಸರಾದ ಶ್ರೀ ಜೀವೋತ್ತಮ ತೀರ್ಥ ಎಂದು ನಾಮಾಭಿಧಾನ ಮಾಡಿದರು.

ಅಲ್ಪವಯಸ್ಸಾದರೂ ಜ್ಞಾನಿ ಹಾಗೂ ಪ್ರಗಲ್ಭ ಬುದ್ಧಿಮತ್ತೆಯ ಈ ವಟುವಿಗೆ ಶ್ರೀ ವಾಸುದೇವತೀರ್ಥ ಸ್ವಾಮಿಗಳು ಕಾಲೋಚಿತ ಉಪದೇಶ ನೀಡಿದರು. ಇತಿಹಾಸ-ಭೂಗೋಲಗಳನ್ನು ಲಕ್ಷಿಸಿ ಧರ್ಮ ಸಂಸ್ಕೃತಿಯ ರಕ್ಷಣೆಯ ಹೊಣೆಯನ್ನು ಅರಿತು ಸಮಾಜಸಮೃದ್ಧಿಗಾಗಿ ಯಾವ ರೀತಿಯಲ್ಲಿ ಮುಂದುವರಿಯುಬೇಕು ಎಂಬುದನ್ನು ಚಿಂತನೆ ಮಾಡುವಾಗಲೇ ತಮ್ಮ ಸದಾಚಾರ-ಕರ್ತೃತ್ವ ಶಕ್ತಿಗಳಿಂದ ಶಿಷ್ಯರ ಹೃದಯದಲ್ಲಿ ಹೇಗೆ ಸ್ಥಾನ ಪಡೆಯಬೇಕು. ಸಮಾಜವು ಧರ್ಮಪೀಠದ ಶಕ್ತಿಯಾಗಿದ್ದು ಧರ್ಮಪೀಠವು ಸಮಾಜದ ಭೂಷಣ. ಕುಲದೇವತೆಗಳು ಸಾರಸ್ವತ ಸಮಾಜದ ರಕ್ಷಾ ಕವಚಗಳಾಗಿವೆ ಎಂಬುದನ್ನು ನೆನಪಿಟ್ಟುಕೊಂಡು ಸಮಾಜದ ಶಿರಸ್ಸು ನಿತ್ಯ ಉನ್ನತವಾಗಿರುವಂತೆ ನಿಮ್ಮಿಂದ ನಿರಂತರ ಕಾರ್ಯ ನಡೆಯುತ್ತಿರಲಿ.

ಶ್ರೀ ವಾಸುದೇವತೀರ್ಥರು ಪಂಢರಪುರದೆಡೆಗೆ ಪಾದಯಾತ್ರೆ ಹೊರಟರು. ನಡಿಗೆಯ ಶಕ್ತಿ ಕಡಿಮೆಯಾಗಿತ್ತು, ಮನಸ್ಸಿನ ಒಲವು ತೀವ್ರವಾಗಿತ್ತು. ಒಂದೆಡೆ ದೇಹ ಕ್ಷೀಣವಾಗುತ್ತಿದ್ದರೂ ಹೃದಯದಲ್ಲಿದ್ದ ಇಚ್ಛೆಯ ಜ್ಯೋತಿಯ ಬೆಳಕಿನಲ್ಲಿ ಅವರು ಪಂಢರಪುರ ತಲುಪಿದರು. ವಿಟ್ಠಲ ದರ್ಶನದಿಂದ ಅವರ ಮನಸ್ಸು ಕೃತಾರ್ಥ ಗೊಂಡಿತು. ಸಮಾಜದ ಹಿತವನ್ನು ಚಿಂತಿಸುತ್ತ ಶ್ರೀ ವಾಸುದೇವತೀರ್ಥ ಸ್ವಾಮಿಗಳು ದೇಹತ್ಯಾಗ ಮಾಡಿದರು.

ಶ್ರೀ ವಾಸುದೇವತೀರ್ಥ ಸ್ವಾಮೀಜಿಯವರ ಕಾಲಕೀರ್ದಿಯಲ್ಲಿ ಆರಂಭವಾದ ಧರ್ಮಾಂತರದ ಪಿಡುಗು ಶ್ರೀ ಜೀವೋತ್ತಮತೀರ್ಥರ ಕಾಲದಲ್ಲಿ ಉಗ್ರಸ್ವರೂಪ ತಾಳಿತು. ನಿತ್ಯ ಉಪಯೋಗದ ಪಿತ್ರಾರ್ಜಿತ ಮನೆ, ಹೊಲ, ತೋಟಗಳನ್ನು ಬಿಟ್ಟು ಭಾವಿಕರು ತಂಡೋಪತಂಡವಾಗಿ ಬೇರೆ ಸ್ಥಳಗಳನ್ನು ಸೇರಿದರು.

ಶ್ರೀ ಜೀವೋತ್ತಮತೀರ್ಥ ಸ್ವಾಮೀಜಿಯವರು ಈ ಸ್ಥಳಾಂತರಿತ ಸಾರಸ್ವತ ಸಮಾಜದೊಂದಿಗೆ ಸಂಪರ್ಕವಿಟ್ಟುಕೊಂಡು ಸಮಾಜಕ್ಕೆ ಧೈರ್ಯ-ಸ್ಥೈರ್ಯ ಕೊಡುತ್ತಿರುವಾಗಲೇ **ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ** ಎಂಬ ಗೀತಾ ವಚನದಂತೆ ಎಲ್ಲರೂ ದೃಢಚಿತ್ತರಾಗಿ ಧರ್ಮ ಸಂಸ್ಕೃತಿಗಳ ರಕ್ಷಣೆಗಾಗಿ ಅಸೀಮ ತ್ಯಾಗ ಮಾಡಲು ಪ್ರವೃತ್ತರನ್ನಾಗಿ ಮಾಡಿದರು. ಹೋದ ಹೋದಲ್ಲಿ ಭೂಮಿಗೆ ನಿಷ್ಠರಾಗಿ ಕುಲದೇವತೆಗಳ ಪ್ರತೀಕಗಳನ್ನು ಸಂಗಡ ಒಯ್ಯುವುದು ಮತ್ತು ಸುಖದುಃಖದ ಕಾಲದಲ್ಲಿಯೂ ಗುರುಗಳ ಆಶೀರ್ವಾದ ಪಡೆಯುತ್ತಿರಬೇಕೆಂದು ಸಲಹೆ ನೀಡಿದರು.

ಗುರುಗಳ ಮನಸ್ಸು ಉದ್ವಿಗ್ನಾವಸ್ಥೆಯಲ್ಲಿದ್ದಾಗಲೂ ಸಮಾಜದ ಸಾಂತ್ವನ ಕಾರ್ಯ ಮಾಡುತ್ತ ತನ್ನ ಅಶಾಂತ ಮನಸ್ಸನ್ನು ತಿಳಿಗೊಳಿಸಿಕೊಳ್ಳುತ್ತ ಪರಮಾತ್ಮನ ಅನುಗ್ರಹಕ್ಕಾಗಿ ದುರ್ಗಮ, ದುರ್ಲಭ, ಪವಿತ್ರ ತೀರ್ಥಕ್ಷೇತ್ರಗಳ ಯಾತ್ರೆ ಕೈಕೊಂಡರು. ಪ್ರತಿಯೊಂದು ತೀರ್ಥಕ್ಷೇತ್ರದ ಯಾತ್ರೆಯಲ್ಲಿಯೂ ಸಮಾಜಕ್ಕೆ ಮಾರ್ಗದರ್ಶನ ಮಾಡುವ, ಸಮಾಜದ ಉಜ್ವಲ ಭವಿತವ್ಯ ರೂಪಿಸುವ ಪ್ರೇರಣೆಗಳು ಅವರಿಗೆ ಲಭಿಸಿದವು. ಸಮುದ್ರದ ಆಳಕ್ಕೆ ಇಳಿದು ಅಮೂಲ್ಯ ಮುತ್ತುಗಳನ್ನು ಹೊರತರುವಂತೆ ಸಮಾಜವನ್ನು ರೂಪಿಸಲು ವಿವಿಧ ಉಪಾಯಗಳನ್ನು ಸಂಶೋಧಿಸಿದರು. ನಿರ್ವಾಸಿತರ ತಂಡಗಳು ಒಂದೊಂದಾಗಿ ಬರುತ್ತಲೇ ಇದ್ದವು. ಅವರು ನಿರ್ಜನ ಪ್ರದೇಶದಲ್ಲಿ ಡೇರೆಗಳನ್ನು ನಿಲ್ಲಿಸಿ ಇಲ್ಲವೇ ಗುಡಿಸಲುಗಳನ್ನು ಕಟ್ಟಿಕೊಂಡು ಇರುತ್ತಿದ್ದರು. ದೇವ ಗುರುಗಳ ಶ್ರದ್ಧೆಗೆ ವ್ಯತ್ಯಯ ಬರದಂತೆ ಅವರು ಮಾಡಿದ ಕಾರ್ಯ ಸ್ಮರಣೀಯವಾಗಿದೆ.

ಪೂಜ್ಯ ಜೀವೋತ್ತಮತೀರ್ಥರು ಅಸಾಮಾನ್ಯ ಚೈತನ್ಯ ಹೊಂದಿದ್ದರೂ ತಪಸ್ವಿ, ಮನಸ್ವಿ, ಯಶಸ್ವಿ ಎಂಬ ಶಬ್ದಗಳಿಂದ ಅವರ ಜೀವನ ವರ್ಣಿಸಬಹುದು. ಎಪ್ಪತ್ತು ವರ್ಷಗಳ ಸುದೀರ್ಘ ಕಾಲಕೀರ್ದಿ ಅನೇಕ ಚಮತ್ಕಾರಿಕ ಘಟನೆಗಳಿಂದ ಕೂಡಿದೆ. ಶ್ರೀಮದ್ ಮಧ್ವಾಚಾರ್ಯರಂತೆ ಅವರು ದ್ವೈತ ಮತದ ಮೂಲಭೂತ ತತ್ವಗಳನ್ನು ಪ್ರತಿಪಾದಿಸುತ್ತಾ ಮಧ್ವಾಚಾರ್ಯರಂತೆ ಕೆಲವು ಚಮತ್ಕಾರಗಳನ್ನು ಮಾಡಿದ್ದಾರೆ. ಅವರು ಯೋಗ ಮತ್ತು ಜ್ಞಾನಗಳ ಪ್ರತ್ಯಯ ಬಿಂಬಿಸಿದ್ದಾರೆ. ಅವರು ಕೆಲವು ಪ್ರಮಾಣದಲ್ಲಿ ಮಧ್ವಾಚಾರ್ಯರನ್ನು ಅನುಸರಿಸಿದ್ದಾರೆನ್ನಬಹುದು.

ಶ್ರೀ ಜೀವೋತ್ತಮತೀರ್ಥರ ವಿಷಯವಾಗಿ ಇದ್ದ ಆದರ ಭಾವವನ್ನು ಧರ್ಮಾಧಿಕಾರಿಗಳು, ಲೇಖಕ-ಕವಿಗಳು, ಸಮಾಜ ಸೇವಕರು ವಿವಿಧ ರೂಪದಿಂದ ವ್ಯಕ್ತ ಪಡಿಸಿದ್ದಾರೆ. ಅವರ ಬಗ್ಗೆ ಬರೆದ ಬರಹಗಳು ಇಂದಿಗೂ ಪ್ರಾಚೀನ ಗ್ರಂಥ ಮತ್ತು ಹಸ್ತಲಿಖಿತಗಳಲ್ಲಿ ಓದಬಹುದು.

ಪೂಜ್ಯ ಇಂದಿರಾಕಾಂತತೀರ್ಥ ಸ್ವಾಮಿಜೀಯವರು ಸಾಗರ ರಾಮಾಚಾರ್ಯ ವಿರಚಿತ ಶ್ರೀಮತ್ಸುನೀತಿ ಭಾಗವತ ಎಂಬ ಪುರಾತನ ಸಂಸ್ಕೃತ ಗ್ರಂಥವನ್ನು ಸಂಪಾದಿಸಿ ಅದರಲ್ಲಿ ಮರಾಠಿ ಭಾವಾರ್ಥದ ಪುರವಣಿಗೆಯೊಂದಿಗೆ ಶ್ರೀ ಶಕೆ 1844ರಲ್ಲಿ ಪ್ರಕಟಿಸಿದರು. ಈ ಗ್ರಂಥದ ಪ್ರಥಮ ಸ್ಕಂಧದ ಆರನೆಯ ಶ್ಲೋಕದಲ್ಲಿ ಶ್ರೀ ಜೀವೋತ್ತಮ ತೀರ್ಥರನ್ನು ಸ್ಮರಿಸುವಾಗ ಹೀಗೆ ಬರೆಯಲಾಗಿದೆ.

**ರಮ್ಯಾ ಯದೀಯಾ ಬಹವೊ ನಿಬಂಧಾ**
**ಅದ್ಯಾಪಿಲೋಕಸ್ಯಹರಂತಿ ಹೃತ್ಸ್ಥಮ್**
**ತಮೋ ವಿನಷ್ಯಂತಿ ಚ ಮಂಗಲಂ ಮಾಂ**
**ಸ ಪಾತು ಜೀವೋತ್ತಮ ತೀರ್ಥವರ್ಯಾಃ ॥**

ಯಾರಿಂದ ರಚಿತವಾದ ಅನೇಕ ಮನೋಹರ ಗ್ರಂಥಗಳು ಇಂದಿಗೂ ಜನ ಮಾನಸದಲ್ಲಿಯ ಅಜ್ಞಾನ ನಿರ್ಮೂಲನೆಯಿಂದಾಗಿ ಮಂಗಲದಾಯಕವಾಗಿರುವವೊ ಆ ಶ್ರೀ ಗೋಕರ್ಣ ಸಂಸ್ಥಾನಾಧೀಶರಾದ ಶ್ರೀ ಜೀವೋತ್ತಮತೀರ್ಥ ಗುರುವರ್ಯರು ನಮ್ಮನ್ನು ರಕ್ಷಿಸಲಿ.

ತಮ್ಮ ಕಾಲಕೀರ್ದಿಯಲ್ಲಿ ಧರ್ಮ ಮತ್ತು ಧಾರ್ಮಿಕತೆ, ಸದಾಚಾರ, ಮತ್ತು ಅಧ್ಯಾತ್ಮ, ಯೋಗವಿದ್ಯೆ ಮತ್ತು ವ್ಯವಹಾರ ಚಾತುರ್ಯ, ಅಖಂಡ ಸ್ವಾಧ್ಯಾಯ, ಮತ್ತು ಕಣ್ಣು, ಕಿವಿ, ಮನಸ್ಸುಗಳನ್ನು ಜಾಗೃತವಾಗಿಟ್ಟು ಮಾಡಿದ ತೀರ್ಥಯಾತ್ರೆಗಳು ಇವುಗಳಿಂದ ಲಭಿಸಿದ ಸಿದ್ಧಿಯಿಂದ ಶ್ರೀ ಜೀವೋತ್ತಮತೀರ್ಥರ ವ್ಯಕ್ತಿತ್ವವು ಹಿಮಾಲಯ ದೊಳಗಿನ ಒಂದು ಉತ್ತುಂಗ ಶಿಖರದಂತೆ ಸಮಾಜಕ್ಕೆ ಲಕ್ಷ್ಯವೇಧಿಯಾಗಿತ್ತು.

ಶ್ರೀ ಸ್ವಾಮೀಜಿಯವರು ತೀರ್ಥಯಾತ್ರೆಗಾಗಿ ಉತ್ತರಕ್ಕೆ ಪಯಣಿಸಿದರು. ಪ್ರಯಾಗ, ಕಾಶಿ, ಕುರುಕ್ಷೇತ್ರ ಸರಸ್ವತಿ, ವರಾಹ ಪುಷ್ಕರ, ಹರಿದ್ವಾರ, ಬದರೀಕಾಶ್ರಮ ಮೊದಲಾದ ಕ್ಷೇತ್ರಗಳ ತೀರ್ಥಯಾತ್ರೆಗಳನ್ನು ಮಾಡಿದರು. ಹಿಮಾಲಯದಲ್ಲಿ ಉಗಮವಾದ ಗಂಡಕೀನದಿಗೆ ಶಿಲಾನದಿಯೆಂದು ಕರೆಯುತ್ತಿದ್ದರು. ಅಲ್ಲಿ ಶಾಲಿಗ್ರಾಮ ಶಿಲೆಗಳು ದೊರಕುತ್ತಿದ್ದವು. ಅಲ್ಲಿಯ ಪರಿಸರದಲ್ಲಿ ಜೀವೋತ್ತಮ ತೀರ್ಥರಿಗೆ ಮೂರು ಧಾತು ನಿರ್ಮಿತ ಮೂರ್ತಿಗಳು ಸಿಕ್ಕವು. ಅವುಗಳಿಗೆ ದಿಗ್ವಿಜಯ ವಿಟ್ಠಲ, ಭೂವಿಜಯ ವಿಟ್ಠಲ, ವೀರ ವಿಟ್ಠಲ ಎಂದು ಹೆಸರಿಸಿ ತಾವು ಬರುವಾಗ ತಮ್ಮೊಡನೆ ತಂದರು. ಶಿಲಾನದಿಯ ಹತ್ತಿರ ಶ್ರೀ ಜೀವೋತ್ತಮ ತೀರ್ಥರು ವಾಸ್ತವ್ಯದಲ್ಲಿದ್ದಾಗ ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಶ್ರೀವಾದಿರಾಜತೀರ್ಥರು ತೀರ್ಥಯಾತ್ರೆ ಮಾಡುತ್ತ ಅಲ್ಲಿ ತಲುಪಿದರು. ಅಲ್ಲಿ ಉಭಯ ಮಠಾಧಿಪತಿಗಳು ಭೇಟಿಯಾದರು.

ಈ ವಾಸ್ತವ್ಯದಲ್ಲಿ ಶ್ರೀ ಜೀವೋತ್ತಮ ತೀರ್ಥ ಸ್ವಾಮಿಗಳು ತಮ್ಮ ಇಹಯಾತ್ರೆಯನ್ನು ಪೂರ್ಣಗೊಳಿಸುವ ಉದ್ದೇಶದಿಂದ ಶಿಲಾ ನದಿಯ ತೀರದಲ್ಲಿ ಆಸನಸ್ಥರಾಗಿ ನಿರಶನ ವ್ರತ ಕೈಕೊಂಡರು. ಕೆಲದಿನಗಳ ನಂತರ ಅವರಿಗೊಂದು

ಸಾಕ್ಷಾತ್ಕಾರವಾಯಿತು. ಗುರುಪರಂಪರಾಮೃತದಲ್ಲಿ ಅವರಿಗೆ ಆಕಾಶವಾಣಿ ಕೇಳಿಸಿತು ಎಂದು ಹೇಳಲಾಗಿದೆ. ಆ ಸಂದೇಶ ಹೀಗಿತ್ತು. ಎಲೈ ಯತಿಶ್ರೇಷ್ಠನೆ ! ಈ ಜನ್ಮದಲ್ಲಿ ನಾನು ನಿಮ್ಮನ್ನು ಭೇಟಿಯಾಗುವಂತಿಲ್ಲ. ಅನಶನವ್ರತದಿಂದ ದೇಹವನ್ನು ದಂಡಿಸಬಾರದು. ಈಗ ಪ್ರಾರಂಭಿಸಿದ ಈ ವ್ರತವನ್ನು ನನಗೆ ಸಮರ್ಪಿಸು. ನಿಮ್ಮ ಅವತಾರ ಮುಗಿಯುವ ಹೊತ್ತಿಗೆ ಪೂರ್ವ ಸೂಚನೆಯಾಗಲಿದೆ. ನೀವು ಜೀವನಮುಕ್ತರ ಲೋಕ ಸೇರುತ್ತೀರಿ. ಆಗ ನಿಮಗೆ ನನ್ನ ದರ್ಶನವಾಗುವುದು.

ಈ ಸಾಕ್ಷಾತ್ಕಾರದ ನಂತರ ಅವರು ತಮ್ಮ ವ್ರತದ ಪರಿಸಮಾಪ್ತಿ ಮಾಡಿ ಹಿಮಾಲಯದಿಂದ ತಿರುಗಿ ಬಂದರು. ಮಥುರಾ-ವೃಂದಾವನಕ್ಕೆ ಬಂದು ಶ್ರೀ ಗೋಪಾಲಕೃಷ್ಣನ ದರ್ಶನ ಮಾಡಿ ದಕ್ಷಿಣಕ್ಕೆ ಬರುತ್ತ ಪಂಢರಪುರದಲ್ಲಿಯ ವಿಟ್ಠಲ ರಖುಮಾಯಿಯ ದರ್ಶನ ಪಡೆದು ನೇರವಾಗಿ ಗೋಮಂತಕಕ್ಕೆ ಆಗಮಿಸಿದರು. ಮುಂದೆ ಕಾಣಕೋಣ ತಾಲೂಕಿನ ಶ್ರೀ ಪರಶುರಾಮಮೂರ್ತಿಯ ದರ್ಶನ ಮಾಡಿ ಅಂಕೋಲಾ-ಗೋಕರ್ಣ ಮಾರ್ಗವಾಗಿ ಭಟ್ಕಳ ತಲುಪಿದರು.

## ವಿಟ್ಠಲನ ಮೂರು ಪ್ರತಿಮೆಗಳು

ದಕ್ಷಿಣ ಭಾರತದಲ್ಲಿ ಗೋಕರ್ಣ ಒಂದು ಶ್ರೇಷ್ಠ ತೀರ್ಥಕ್ಷೇತ್ರವೆಂದು ಆ ಕಾಲದಲ್ಲಿ ಪ್ರಸಿದ್ಧವಾಗಿತ್ತು. ಮಠದ ಆದ್ಯ ಸಂಸ್ಥಾಪಕರಾದ ಶ್ರೀಮನ್ನಾರಾಯಣ ತೀರ್ಥರು ಕಾಶಿ ಕ್ಷೇತ್ರದ ಪಂಚಗಂಗಾ ಘಾಟದಲ್ಲಿ ಸ್ಥಾಪಿಸಿದ ಧರ್ಮಪೀಠದ ಮಹತ್ವ ಕಡಿಮೆಯೇನಲ್ಲ. ವಾರಣಾ, ಅಸಿ, ಧೂತಪಾಪಾ, ಮತ್ತು ಕಿರಣಾ ನದಿಗಳು ಯಾವ ಸ್ಥಳದಲ್ಲಿ ತಮ್ಮ ಅಸ್ತಿತ್ವವನ್ನು ಯಮುನಾ ಸರಸ್ವತಿ ನದಿಗಳ ಸಂಗಮದಿಂದ ಪರಿಪೂರ್ಣವಾದ ಗಂಗಾಮಾತೆಗೆ ಸಮರ್ಪಿಸಿ ಲುಪ್ತವಾಗುವ ಸ್ಥಳದಲ್ಲಿ ಕಟ್ಟಿದ ಮಠದ ಮಹತ್ವ ವಿಶೇಷವಾಗಿದ್ದರೂ ವ್ಯಾವಹಾರಿಕವಾಗಿ ಈ ಮಠದ ಉಪಯೋಗ ಅತ್ಯಲ್ಪವಾಗಿತ್ತು. ಪಶ್ಚಿಮ ಭಾರತದಲ್ಲಿ ಅಲ್ಲಲ್ಲಿ ಪಸರಿಸಿದ ಗೌಡ ಸಾರಸ್ವತ ಸಮಾಜಕ್ಕೆ ಕಾಶಿ ದೂರದ ಪ್ರದೇಶವಾಗಿತ್ತು. ಆಗಿನ ಕಾಲದಲ್ಲಿ ವಾಹನ ಸೌಕರ್ಯ ಅಷ್ಟಿರಲಿಲ್ಲ. ಅಂತರವೂ ದೂರವಿತ್ತು. ಶ್ರದ್ಧಾ ಭಕ್ತಿಗಳಿಂದ ಕಾಶಿಗೆ ಹೋದವರಿಗೆ ಮಾತ್ರ ಮಠದಲ್ಲಿ ವಸತಿ ಸೌಕರ್ಯ ಸಿಗುತಿತ್ತು. ವಿದ್ಯಾರ್ಜನೆಗಾಗಿ ಅಲ್ಪ ಸಂಖ್ಯೆಯ ಬ್ರಾಹ್ಮಣರು ಕಾಶಿಗೆ ಹೋಗುತ್ತಿದ್ದರು. ಅವರಿಗೂ ಅಲ್ಲಿ ಭೋಜನ, ನಿವಾಸ ಹಾಗೂ ವಿದ್ಯಾಭ್ಯಾಸ ವ್ಯವಸ್ಥೆ ಸಿಗುತಿತ್ತು. ತೀರ್ಥಕ್ಷೇತ್ರದಲ್ಲಿ ಮಾಡಬೇಕಾದ ಧಾರ್ಮಿಕ ಕಾರ್ಯಗಳನ್ನು ಪಂಡ್ಯಾರಿಂದ ಮಾಡಿಸಿಕೊಳ್ಳುವ ಬದಲು ಆ ಕಾರ್ಯಗಳನ್ನು ಸಜಾತಿಯ ಅರ್ಚಕರಿಂದ

ಮಾಡಿಸಿಕೊಳ್ಳುವುದು ಯುಕ್ತವಾಗಿತ್ತು. ಈ ಎಲ್ಲ ದೃಷ್ಟಿಗಳಿಂದ ವಾರಣಾಸಿಯಲ್ಲಿಯ ಮಠದ ಮಹತ್ವವಿದ್ದರೂ ಸಾರಸ್ವತರು ಬೇರೆ-ಬೇರೆ ಕಡೆಗೆ ಸ್ಥಳಾಂತರ ಹೊಂದಿದ್ದರಿಂದ ಅವರನ್ನು ಸಂಪರ್ಕಿಸಲು ದಕ್ಷಿಣ ಭಾರತದಲ್ಲಿ ಒಂದು ಮಠದ ಅಗತ್ಯವನ್ನು ಮನಗಂಡು ಶ್ರೀ ಜೀವೋತ್ತಮ ತೀರ್ಥರು ಗೋಕರ್ಣದಲ್ಲಿ ಮಠ ಸ್ಥಾಪಿಸಲು ನಿರ್ಧಾರ ಮಾಡಿರಬೇಕು.

ಅವರು ಗೋಕರ್ಣ ಕ್ಷೇತ್ರಕ್ಕೆ ಬಂದು ಒಂದು ಮಠವನ್ನು ಕಟ್ಟಿಸಿದರು. ಅದು ಮಠ ಪರಂಪರೆಯಲ್ಲಿ ನಿರ್ಮಿತವಾದ ಮೂರನೆಯ ಮಠ. ಆ ಮಠ ವಾಸ್ತುಪೂರ್ಣ ವಾಗುತ್ತಿರುವಾಗ ಸಮಾಜದ ಮನಸ್ಸಿನಲ್ಲಿ ಗುರುಭಕ್ತಿ ಬೆಳೆಯಿತು. ದಕ್ಷಿಣ ಕೊಂಕಣ, ಗೋಮಂತಕ ಪ್ರಾಂತ, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಈ ನಾಲ್ಕು ಪ್ರದೇಶಗಳ ಮಧ್ಯವರ್ತಿಯಾಗಿ ಗೋಕರ್ಣ ಕ್ಷೇತ್ರವಿದ್ದುದರಿಂದ ಅಲ್ಲಿಂದ ಸಮಾಜದೊಂದಿಗೆ ಸಂಪರ್ಕವಿಟ್ಟುಕೊಳ್ಳಲು ಅನುಕೂಲವಾಗುತ್ತದೆಯೆಂಬ ಭಾವನೆ ಗುರುಗಳಲ್ಲಿತ್ತು. ಭಟ್ಕಳದಲ್ಲಿ ಆದ್ಯಮಠ ಇದ್ದು ಅನಂತರ ಬಸ್ರೂರಿನಲ್ಲಿ ಮಠ ಸ್ಥಾಪನೆಯಾದರೂ ಸಮಾಜವು ಗೋಕರ್ಣಮಠ ಎಂದು ಗುರುತಿಸಿಕೊಳ್ಳತೊಡಗಿತು. ಗೋಕರ್ಣ ಮಠದಲ್ಲಿ ಶ್ರೀ ಜೀವೋತ್ತಮತೀರ್ಥ ಸ್ವಾಮಿಜೀಯವರು ಶ್ರೀ ವಿಟ್ಠಲನ ಒಂದು ಪ್ರತಿಮೆಯನ್ನು ವಿಧಿಪೂರ್ವಕ ಪ್ರತಿಷ್ಠಾಪಿಸಿ ಆ ಪ್ರತಿಮೆಗೆ ಭೂವಿಜಯ ವಿಟ್ಠಲ ಎಂದು ನಾಮಕರಣ ಮಾಡಿದರು.

ಶ್ರೀ ಜೀವೋತ್ತಮತೀರ್ಥ ಸ್ವಾಮೀಜಿಯವರು ಒಬ್ಬ ದೃಷ್ಟಾರರಾಗಿದ್ದರು-ಎಂಬುದು ಕಾಲಾಂತರದಲ್ಲಿ ತಿಳಿಯಿತು. ಗೋಕರ್ಣ ಮಠವನ್ನು ಮುಖ್ಯ ಕೇಂದ್ರ ವನ್ನಾಗಿ ಮಾಡಿಸುವುದು ಶ್ರೀ ಜೀವೋತ್ತಮತೀರ್ಥರ ಮಹತ್ತರ ಗುರಿಯಾಗಿತ್ತು. ಅದಕ್ಕೆ ಅನೇಕ ತೊಂದರೆಗಳಿದ್ದವು. ಮಠದ ಪರಿಸರದಲ್ಲಿ ಸಮಾಜ ಬಾಂಧವರ ವಿಶೇಷ ವಸತಿಯಿರಲಿಲ್ಲ. ಗೋಕರ್ಣ ಒಂದು ಪವಿತ್ರ ತೀರ್ಥಕ್ಷೇತ್ರವಾದುದರಿಂದ ಇತರ ಜಾತಿ ಸಂಪ್ರದಾಯಗಳ ಭಾವುಕರ ಪ್ರಚಂಡ ಜನದಟ್ಟಣೆ ಇದ್ದುದರಿಂದ ಮುಂದೆ ಸಮಾಜಕ್ಕೆ ಉಪಯುಕ್ತವಾದೀತೆಂಬ ದೂರದೃಷ್ಟಿಯಿಂದ ಶ್ರೀ ಜೀವೋತ್ತಮ ತೀರ್ಥ ಸ್ವಾಮಿಜೀಯವರು ಗೋಕರ್ಣ ಕ್ಷೇತ್ರದಲ್ಲಿ ಸಾಕಷ್ಟು ಭೂಮಿಯನ್ನು ಖರೀದಿಸಿ ಭೂವಿಜಯ ವಿಟ್ಠಲ ಎಂಬ ಹೆಸರು ಸಾರ್ಥಕಗೊಳಿಸಿದರು.

ಕಾಲಾಂತರದಲ್ಲಿ ಒಂದು ಘಟನೆ ನಡೆಯಿತು. ಉಡುಪಿ ಅಷ್ಟಮಠದಲ್ಲಿಯ ಸೋದೆ ಶ್ರೀ ವಾದಿರಾಜ ಮಠಾಧೀಶರು ಗೋಕರ್ಣ ಕ್ಷೇತ್ರದಲ್ಲಿ ತಮ್ಮದೊಂದು

ಶಾಖಾಮಠ ಕಟ್ಟಿಸಬೇಕೆಂದು ಬಂದು ಗೋಕರ್ಣಮಠದ ಆರನೆಯ ಗುರುಗಳಾದ ಶ್ರೀ ರಾಮಚಂದ್ರತೀರ್ಥ ಸ್ವಾಮಿಜೀಯವರ ಬಳಿ ಭೂದಾನ ಕೇಳಿದರು. ಇನ್ನೊಂದು ಸಂಪ್ರದಾಯದ ದೇವತೆಗಾಗಿ, ಮಠಮಂದಿರ ಕಟ್ಟಿಸಲು ಭೂದಾನ ಕೊಡುವುದು ಸಾರಸ್ವತ ಸಂಪ್ರದಾಯದ ದೃಷ್ಟಿಯಲ್ಲಿ ಭೂಷಣಾಸ್ಪದವಾಗಿತ್ತು. ಇದರಿಂದ ಇನ್ನೊಂದು ಸಂಪ್ರದಾಯದೊಂದಿಗೆ ನಮ್ಮ ಸಂಪ್ರದಾಯದ ಸ್ನೇಹಬಾಂಧವ್ಯಗಳು ಬೆಳೆಯುತ್ತವೆ. ಎಲ್ಲರೊಡನೆ ಸ್ನೇಹ ಸೌಹಾರ್ದದಿಂದ ಬಾಳಬೇಕೆಂಬ ಉದ್ದೇಶದಿಂದ ಸ್ವಮಠದ ಒಡೆತನಕ್ಕೆ ಸೇರಿದ ಪ್ರಶಸ್ತವಾದ ಸ್ಥಳವನ್ನು ದಾನ ಕೊಟ್ಟರು.

ಈ ದಾನದಿಂದ ಮುಂದೆ ತೊಂದರೆಗಳುಂಟಾಗುತ್ತವೆ ಎಂದು ಶ್ರೀ ರಾಮಚಂದ್ರತೀರ್ಥರು ಕನಸಿನಲ್ಲಿಯೂ ಎಣಿಸಿರಲಿಲ್ಲ. ವಾದಿರಾಜ ಮಠದ ಒಂದು ಗುಂಪು ಆ ಸಂಪೂರ್ಣ ಭೂಮಿಯ ಹಕ್ಕುದಾರರು ತಾವು ಎಂದು ವಾದಿಸಿ ನ್ಯಾಯಾಲಯದ ಮೊರೆ ಹೊಕ್ಕರು. ಅದಕ್ಕೆ ಕಾರಣ ಗೋಕರ್ಣಮಠದಲ್ಲಿ ಪ್ರತಿಷ್ಠಾಪಿಸಿದ ದೇವರಿಗೆ ಭೂವಿಜಯ ವಿಟ್ಠಲ ಎಂಬ ಹೆಸರಿದ್ದರೂ ರೂಢಿಯಲ್ಲಿ ವಿಟ್ಠಲನೆಂದು ಕರೆಯುತ್ತಿದ್ದರು. ಸರಕಾರಿ ಕಾಗದ ಪತ್ರಗಳಲ್ಲಿ ಆ ಭೂಮಿಯ ಸಂಪೂರ್ಣ ಒಡೆತನ ಶ್ರೀ ವಿಟ್ಠಲ ದೇವರ ಭೂಮಿ ಎಂದೇ ಇತ್ತು. ಶ್ರೀ ವಾದಿರಾಜ ಮಠದ ದೇವರೂ ವಿಟ್ಠಲ ಎಂದಾಗಿತ್ತು. ಎರಡೂ ದೇವರ ಹೆಸರು ಒಂದೇ ಆಗಿರುವುದರಿಂದ ಅನಂತರ ಬಂದ ವಾದಿರಾಜ ಮಠದ ಒಂದು ಗುಂಪು ಶ್ರೀ ವಿಟ್ಠಲ ದೇವ ಭೂಮಿ ಎಂದರೆ ತಮ್ಮ ಮಠದ ಆಸ್ತಿಯೆಂದು ಪ್ರತಿಪಾದಿಸಲು ಹೊರಟರು. ಉಪಕಾರಕ್ಕೆ ಹೋಗಿ ಉಪದ್ರವ ಕಟ್ಟಿಕೊಂಡಂತಾಗಿತ್ತು.

ಅಂದಿನ ಗುರುಗಳಾದ ಶ್ರೀ ರಾಮಚಂದ್ರತೀರ್ಥರು ಮಾತ್ರ ವಿಚಲಿತರಾಗ ಲಿಲ್ಲ. ಸಮಾಜದ ಸದಸ್ಯರು ಉದ್ವಿಗ್ನರಾದರು. ಆಗ ಗುರುಗಳು ಹೀಗೆ ಹತಾಶರಾಗ ಬೇಡಿ. ಇದಕ್ಕಿಂತ ಕಠಿಣವಾದ ಪರಿಸ್ಥಿತಿಯಲ್ಲಿ ನಮ್ಮ ಸಮಾಜವು ಧೀರಗಂಭೀರವಾಗಿ, ವಿವೇಕದಿಂದ ನಡೆದುದ್ದುಂಟು. ಧರ್ಮ ಮತ್ತು ಸಂಸ್ಕೃತಿಯ ರಕ್ಷಣೆಗಾಗಿ ಅಗ್ನಿಪರೀಕ್ಷೆ ಯಲ್ಲಿಯೂ ಗೆದ್ದು ಬಂದದ್ದುಂಟು. ನಮ್ಮ ವಿಟ್ಠಲದೇವರು ಸಾದಾ ದೇವತೆಯಲ್ಲ. ಪುಣ್ಯಾತ್ಮ ಶ್ರೀ ಜೀವೋತ್ತಮತೀರ್ಥರು ಸಾಧಕ ಬಾಧಕಗಳ ವಿಚಾರ ವಿಮರ್ಶೆ ಯಿಂದಲೇ ಯೋಗ್ಯ ಹೆಸರಿಟ್ಟಿದ್ದಾರೆ. ಉದಾರನಾದ ವಿಟ್ಠಲದೇವರು ಸರ್ವಸ್ವವನ್ನು ದಾನ ಕೊಡಲು ಹಿಂದೆ ಬೀಳಲಿಕ್ಕಿಲ್ಲ. ಕುಮಾರ್ಗದಿಂದ ಯಾರಾದರೂ ನಮ್ಮ ಭೂಮಿ ಯನ್ನು ಕಬಳಿಸಲು ಪ್ರಯತ್ನಿಸಿದ್ದಲ್ಲಿ ಅವರನ್ನು ಬಿಡಲಾರ. ನಮ್ಮ ಎಲ್ಲ ಪ್ರಯತ್ನಗಳು ನ್ಯಾಯ, ವಿವೇಕ, ನೀತಿ, ಸಂಯಮ, ಸಹನಶೀಲತೆ ಸದಾಚಾರದಿಂದ ನಾವು

ಪ್ರಯತ್ನಿಸಿದರೆ ನಮಗೆ ನ್ಯಾಯ ಖಂಡಿತ ಸಿಗುತ್ತದೆ. ದೇವರಲ್ಲಿ ವಿಶ್ವಾಸವಿಟ್ಟರೆ ಜಯ ನಮ್ಮದಾಗುತ್ತದೆ. ಎಂದು ಉಪದೇಶಿಸಿದರು.

ಮಠಾನುಯಾಯಿ ವರ್ಗದವರು ತಮ್ಮ ಹೇಳಿಕೆಯನ್ನು ನ್ಯಾಯಾಲಯದಲ್ಲಿ ಮಂಡಿಸಿದರು. ಮಠದಲ್ಲಿದ್ದ ಕಡತಗಳನ್ನು ಸಾದರ ಪಡಿಸಿದರು. ಪ್ರತಿಸ್ಪರ್ಧಿಗಳ ಬಳಿ ಶ್ರೀ ವಿಟ್ಠಲ ದೇವರ ಹೆಸರಿನ ಸಾಮ್ಯ ಬಿಟ್ಟು ಬೇರಾವ ಪುರಾವೆಗಳೂ ಇರಲಿಲ್ಲ. ಗೌಡ ಸಾರಸ್ವತ ಸಮಾಜದ ಪ್ರಯತ್ನಕ್ಕೆ ಯಶಸ್ಸು ಸಿಕ್ಕಿತು. ಶ್ರೀ ಭೂವಿಜಯ ವಿಟ್ಠಲ ದೇವರು ತಮ್ಮ ಪ್ರಭಾವ ಸಿದ್ಧಮಾಡಿ ತೋರಿಸಿದರು.

ಗೋಕರ್ಣ ಮಠ ಸ್ಥಾಪನೆಯ ನಂತರ ಶ್ರೀ ಜೀವೋತ್ತಮ ತೀರ್ಥರು ಬಸರೂರಿಗೆ ಬಂದರು. ತಮ್ಮ ಹುಟ್ಟೂರಿನಲ್ಲಿ ಮಠ ಕಟ್ಟಿಸಿ ತಮಗೆ ಗಂಡಕೀ ನದಿಯಲ್ಲಿ ದೊರಕಿದ ಎರಡನೆಯ ಮೂರ್ತಿಯನ್ನು ಆ ಮಠದಲ್ಲಿ ಪ್ರತಿಷ್ಠಾಪಿಸಿ ತಮ್ಮ ಪೂರ್ವಜರ ಋಣದಿಂದ ಮುಕ್ತರಾದರು. ತಮ್ಮ ದಿಗ್ವಿಜಯದ ಸ್ಮೃತಿಯಾಗಿ ಬಸ್ರೂರಿನಲ್ಲಿ ಪ್ರತಿಷ್ಠಾಪಿಸಿದ ವಿಟ್ಠಲ ಮೂರ್ತಿಯನ್ನು ದಿಗ್ವಿಜಯ ವಿಟ್ಠಲ ಎಂದು ಹೆಸರಿಸಿದರು.

ಶ್ರೀ ಜೀವೋತ್ತಮ ತೀರ್ಥ ಸ್ವಾಮಿಗಳು ತಂದ ಮೂರನೆಯ ಪ್ರತಿಮೆಗೆ ಶ್ರೀವೀರವಿಟ್ಠಲ ಎಂದು ನಾಮಾಭಿಧಾನ ಮಾಡಿದರು. ಪ್ರತಿಮೆಯ ಕಾಲುಗಳಲ್ಲಿ ಪಾದುಕೆಗಳಿದ್ದವು. ಅದರಿಂದಾಗಿ ಬಹುಶಃ ಈ ಹೆಸರು ಕೊಟ್ಟಿರಬೇಕು. ಇಂತಹ ಪಾದುಕಾಧಾರಿ ಪ್ರತಿಮೆಗಳು ತೀರ ವಿರಳವಾಗಿವೆ. ಶ್ರೀ ಸ್ವಾಮಿಜೀಯವರು ಶ್ರೀವೀರವಿಟ್ಠಲ ದೇವರನ್ನು ತಮ್ಮ ಆರಾಧ್ಯದೈವವಾಗಿರಿಸಿ ಆ ಪ್ರತಿಮೆಗೆ ನಿತ್ಯಪೂಜೆ-ಪ್ರಾರ್ಥನೆಗಳನ್ನು ಸಲ್ಲಿಸಿದರು. ಸಂಚಾರದಲ್ಲಿದ್ದಾಗಲೂ ತಮ್ಮೊಂದಿಗೆ ದೇವರನ್ನು ಒಯ್ದು ನಿತ್ಯಪೂಜೆ ಪುರಸ್ಕಾರಗಳಿಗೆ ಖಂಡ ಬೀಳದಂತೆ ನೋಡಿಕೊಂಡರು. ತಾವು ಮಾಡಿದ ತೀರ್ಥಯಾತ್ರೆಗಳ ವಿವರವುಳ್ಳ ತೀರ್ಥಾವಳ ಎಂಬ ಕಾವ್ಯದಲ್ಲಿ ಹೆಜ್ಜೆ ಹೆಜ್ಜೆಗೂ ಶ್ರೀ ವಿಟ್ಠಲ ದೇವರ ಸ್ಮರಣೆ ಮಾಡಿದ್ದಾರೆ. ಗಂಡಕೀ ಯಾತ್ರೆಯಲ್ಲಿರುವಾಗ ಒದಗಿದ ಸಂಕಟನಿವಾರಣೆಯಾದ ನಂತರ ಸ್ವರ್ಗಲೋಕದ ಗೋಮಾತೆಯೆ ಇಲ್ಲಿ ಪ್ರಕಟಳಾದಳು ಅದರ ಹಾಲಿನಿಂದ ತಾವು ಶ್ರೀವೀರ ವಿಟ್ಠಲ ದೇವರಿಗೆ ಅಭಿಷೇಕ ಗೈದೆವೆಂದು ಅವರು ಆ ಕಾವ್ಯದಲ್ಲಿ ದಾಖಲಿಸಿದ್ದಾರೆ.

ನಾಲ್ಕುವರೆ ಶತಕಗಳ ನಂತರ ಶ್ರೀ ವಿಟ್ಠಲ ದೇವರಿಗೆ ತಮ್ಮ ಜನ್ಮಸ್ಥಳದ ದರ್ಶನ ಮಾಡಿಸಿ ಶ್ರೇಯಸ್ಸು ಶ್ರೀಮಠ ಪರಂಪರೆಯ ಇಪ್ಪತ್ತಮೂರನೆಯ ಗುರುವರ್ಯ ಶ್ರೀ ವಿದ್ಯಾಧಿರಾಜತೀರ್ಥ ಸ್ವಾಮಿಗಳಿಗೆ ಲಭಿಸಿತು.

ಶ್ರೀಜೀವೋತ್ತಮತೀರ್ಥ ಸ್ವಾಮಿಜಿಯವರ ಚರಿತ್ರೆ ಹಾಗೂ ಅವರ ತೀರ್ಥಾಟನೆಯ ವಿವರಗಳಿಂದ ಪ್ರೇರಿತರಾದ ಶ್ರೀ ವಿದ್ಯಾಧಿರಾಜ ಗುರುವರ್ಯರು (ಶ್ರೀ ಶಕೆ 1920 ಇ.ಸ. 1998)ರಲ್ಲಿ ಕರ್ನಾಟಕದ ಮಂಕೀ ಗ್ರಾಮದಲ್ಲಿ ತಮ್ಮ ಚಾತುರ್ಮಾಸ್ಯವನ್ನು ಪೂರ್ಣಗೊಳಿಸಿ ದುರ್ಗಮ, ದುರ್ಧರ, ಅಸಾಧ್ಯ ಎಂದು ಗುರುತಿಸಲ್ಪಡುವ ಗಂಡಕೀ ಕ್ಷೇತ್ರದ ಯಾತ್ರೆ ಮಾಡಿ ಅಲ್ಲಿಯ ವಿವಿಧ ನದಿ ಸಂಗಮಗಳಲ್ಲಿ ಅದರಂತೆಯೇ ಪವಿತ್ರತಮ ಶ್ರೀ ದಾಮೋದರ ಕುಂಡದಲ್ಲಿ ತೀರ್ಥಾಚಮನ ಸ್ನಾನ ಮಾಡುವಾಗ ಗುರುಪರಂಪರೆಯ ಎಲ್ಲ ಗುರುವರ್ಯರನ್ನು ಸ್ಮರಿಸಿ, ವಿಶೇಷತಃ ಶ್ರೀ ಜೀವೋತ್ತಮ ತೀರ್ಥ ಸ್ವಾಮಿಜೀಯವರನ್ನು ಶ್ರದ್ಧೆಯಿಂದ ಪೂಜೆ ಮಾಡಿದರು. ಪ್ರತಿಮಾ ರೂಪ ದಲ್ಲಿಯ ಶ್ರೀ ವೀರವಿಟ್ಠಲ ದೇವರು ಅಖಂಡ ಸಂಗಡಿಗರಾಗಿದ್ದರು. ಒಂದರ್ಥದಲ್ಲಿ ನಿತ್ಯಸ್ಮರಣೀಯ ಜೀವೋತ್ತಮ ತೀರ್ಥರ ಸಾನ್ನಿಧ್ಯವಿತ್ತು. ತಮ್ಮ ಮೂಲ ತೀರ್ಥದಲ್ಲಿ ಸ್ನಾನ ಮಾಡುವ ಯೋಗಭಾಗ್ಯ ಪಡೆದ ಶ್ರೀ ವಿದ್ಯಾಧಿರಾಜ ತೀರ್ಥರನ್ನು ಶ್ರೀ ವೀರ ವಿಟ್ಠಲ ದೇವರು ಆಶೀರ್ವದಿಸಿದರು. ಗಂಡಕೀಯಾತ್ರೆಯ ನಂತರ ಗುರುಗಳ ತೇಜಸ್ಸಿ ನಲ್ಲಿ ಆಗುತ್ತಿರುವ ವೃದ್ಧಿಯನ್ನು ಶಿಷ್ಯರು ಗಮನಿಸುತ್ತಿದ್ದಾರೆ. ಅವರ ಧೀರೋದಾತ್ತ ವ್ಯಕ್ತಿಮತ್ತೆಯ ಪ್ರಭಾವ ಅವರ ಸಂಚಾರ ಕಾಲದಲ್ಲಿ ಅಲ್ಲಲ್ಲಿರುವ ಸಮಾಜದ ಮೇಲೆ ಹೇಗಾಗುತ್ತದೆ ಮತ್ತು ಅವರ ಮುಖದಿಂದ ಹೊರಡುವ ಮಂತ್ರ ಶಕ್ತಿಯುಕ್ತ ವಾಣಿಯ ಪ್ರತ್ಯಯ ಹೇಗಾಗುತ್ತದೆ ಎಂಬುದು ನಾವು ನೋಡಿದ್ದೇವೆ.

ಈ ಸಂವತ್ಸರದಲ್ಲಿ (ಶ್ರೀಶಕೆ 1921) ಶ್ರೀ ವೀರವಿಟ್ಠಲ ದೇವರು ಗಂಡಕೀ ಯಾತ್ರೆಯಿಂದ ಹಿಂತಿರುಗಿದ ನಂತರ ಶ್ರೀ ದಿಗ್ವಿಜಯ ವಿಟ್ಠಲನ ಭೇಟಿಗಾಗಿ ಬಸರೂರಿಗೆ ಬಂದಿದ್ದಾರೆ. ಶ್ರೀ ವಿದ್ಯಾಧಿರಾಜತೀರ್ಥರ ಚಾತುರ್ಮಾಸ ವ್ರತಾಚರಣೆ ಯಿಂದ ನಾಲ್ಕುವರೆ ಶತಕ ಪೂರ್ವದಲ್ಲಿ ಎರಡು ಬೇರೆ-ಬೇರೆ ದಾರಿಯಿಂದ ಪಯಣಿಸಿದ ಎರಡೂ ವಿಟ್ಠಲ (ವಿಗ್ರಹಗಳ) ದೇವರ ಸಮ್ಮಿಲನವಾಗಲಿದೆ. ರಾಮಾಯಣದಲ್ಲಿ ರಾಮ-ಭರತ ಮಿಲನದ ವರ್ಣನೆ ಓದಲು ದೊರಕುತ್ತದೆ. ಈ ವಿಟ್ಠಲದ್ವಯರ ಮಿಲನವೂ ಅಷ್ಟೇ ಹೃದಯಸ್ಪರ್ಶಿಯಾಗಲಿದೆ. ಐದು ಶತಕಗಳ ಸಮಾಜದ ಇತಿಹಾಸದಲ್ಲಿ ಈ ಮಹತ್ವದ ಘಟನೆಗೆ ವಿಶೇಷ ಸ್ಥಾನವಿದೆ.

ಶ್ರೀ ಜೀವೋತ್ತಮ ತೀರ್ಥರು ಭಟ್ಕಳ ಮಠಕ್ಕೆ ಹಿಂದಿರುಗಿದ ನಂತರ ಕೆಲದಿನಗಳಲ್ಲಿ ಓರ್ವ ವಿರಕ್ತ ಬ್ರಹ್ಮಚಾರಿಗೆ ದೀಕ್ಷೆ ನೀಡಿ ಶಿಷ್ಯರನ್ನಾಗಿ ಸ್ವೀಕರಿಸಿ ಅವರಿಗೆ ಪುರುಷೋತ್ತಮ ತೀರ್ಥರೆಂದು ನಾಮಕರಣ ಮಾಡಿದರು. ಶ್ರೀವೀರವಿಟ್ಠಲ

ದೇವರ ಪೂಜೆ- ಅರ್ಚನೆಯ ಜವಾಬ್ದಾರಿಯನ್ನು ಅವರಿಗೆ ಒಪ್ಪಿಸಿ ಇನ್ನೊಮ್ಮೆ ತೀರ್ಥ ಯಾತ್ರೆ ಕೈಕೊಂಡರು. ಮೊದಲು ತಿರುಪತಿಗೆ ಹೋದರು ಅಲ್ಲಿ ಶ್ರೀ ವೆಂಕಟೇಶ ದೇವರ ದರ್ಶನಗೈದು ಶ್ರೀಶೈಲಕ್ಕೆ ಪಯಣಿಸಿದರು. ಕಾಂಚೀ ಕ್ಷೇತ್ರದಲ್ಲಿ ಶ್ರೀವರದರಾಜರ ಸಂದರ್ಶನ ಪಡೆದು ರಾಮೇಶ್ವರಕ್ಕೆ ಹೋದರು. ಉಡುಪಿ ಮಾರ್ಗವಾಗಿ ತಿರುಗಿ ಭಟ್ಕಳ ಸೇರಿದರು. ಉಡುಪಿಯಲ್ಲಿ ಶ್ರೀಮಧ್ವಾಚಾರ್ಯರಿಂದ ಸ್ಥಾಪಿತವಾದ ಶ್ರೀಕೃಷ್ಣ ದರ್ಶನ ಪಡೆಯುವುದೇ ಅವರ ಗುರಿಯಾಗಿತ್ತು.

ಭಟ್ಕಳ ಮಠಕ್ಕೆ ಹಿಂದಿರುಗಿದ ಬಳಿಕವೂ ಶ್ರೀಮಠದ ಸೂತ್ರಗಳನ್ನು ಅವರು ಕೈಗೆತ್ತಿಕೊಳ್ಳಲಿಲ್ಲ. ಮಠದ ಹೊರಭಾಗದಲ್ಲಿ ಸ್ಥಾಪಿಸಿದ ಶ್ರೀ ವಿಟ್ಠಲದೇವರ ಉಪಾಸನೆ ಮಾಡುತ್ತ ದಿನಕಳೆದರು.

ಈ ರೀತಿ ಉಪಾಸನೆ ಮಾಡುತ್ತಿರುವಾಗಲೇ ವೈಕುಂಠದಿಂದ ಅವರನ್ನು ಕರೆದೊಯ್ಯಲು ವಿಮಾನಾಗಮನವಾಯಿತು ಎಂದು ಗುರುಪರಂಪರಾಮೃತದಲ್ಲಿ ಹೇಳಲಾಗಿದೆ. ಈ ವಿಮಾನ ಬಂದಾಕ್ಷಣ ಅವರು ಸಮಾಧಿಸ್ಥರಾದರು. ಅವರ ಆತ್ಮವು ನಶ್ವರ ದೇಹತ್ಯಾಗ ಮಾಡಿ ವಿಮಾನಮೂಲಕ ವೈಕುಂಠಕ್ಕೆ ತೆರಳಿತು.

ಗುರುಪರಂಪರಾಮೃತದಲ್ಲಿ ಒಂದು ಚಮತ್ಕಾರಿಕ ವರ್ಣನೆಯಿದೆ. ಪೂಜ್ಯ ಜೀವೋತ್ತಮತೀರ್ಥರ ಪವಿತ್ರ ಆತ್ಮವು ವಿಮಾನ ಮೂಲಕ ವೈಕುಂಠದತ್ತ ಪಯಣಿಸುತ್ತಿದ್ದಾಗ ಉಡುಪಿಯಲ್ಲಿ ಶ್ರೀ ವಾದಿರಾಜತೀರ್ಥ ಸ್ವಾಮಿಯವರು ಶ್ರೀ ಕೃಷ್ಣನಮೂರ್ತಿಯ ಮಂಗಳಾರತಿ ಮಾಡುತ್ತಿದ್ದರು. ಅವರ ಕಿವಿಗಳಿಗೆ ದುಂದುಭಿ ಘೋಷ ಕೇಳಿ ಬಂತು. ಅಂತರ್ಜ್ಞಾನಿಯಾದ ಅವರಿಗೆ ಶ್ರೀ ಜೀವೋತ್ತಮತೀರ್ಥರ ವಿಮಾನ ವೈಕುಂಠದತ್ತ ಸಾಗುತ್ತಿರುವುದನ್ನು ಅರಿತುಕೊಂಡು ಕೈಯಲ್ಲಿದ್ದ ಮಂಗಳಾರತಿಯನ್ನು ಆಕಾಶದ ಕಡೆಗೆ ಬೆಳಗಿದರಂತೆ. ಉಪಸ್ಥಿತರಿಗೆ ಆಶ್ಚರ್ಯವಾಯಿತು. ಉಪಸ್ಥಿತರು ಕೇಳಲಾಗಿ ಶ್ರೀ ಜೀವೋತ್ತಮತೀರ್ಥ ಚರಿತ್ರೆಯನ್ನು ಸಂಕ್ಷಿಪ್ತದಲ್ಲಿ ವಿವರಿಸಿ ಅವರು ವಿಮಾನವನ್ನೇರಿ ವೈಕುಂಠದತ್ತ ಪಯಣಿಸುವುದನ್ನು ಹೇಳಿದರಂತೆ.

ಅಧ್ಯಾತ್ಮವಿದ್ಯೆಯಲ್ಲಿ ಶ್ರೀ ಜೀವೋತ್ತಮತೀರ್ಥರು ದೊಡ್ಡ ಅಧಿಕಾರಿಗಳಾ ಗಿದ್ದರು. ಅವರ ಜ್ಞಾನ ಸಾಧನೆ, ಯೋಗಸಾಧನೆಗಳು ಅವರನ್ನು ಮೇಲಕ್ಕೇರಿಸಿದ್ದವು. ಅವರೊಬ್ಬ ಮಹಾನ್‌ವಿಭೂತಿಗಳಾಗಿದ್ದರು. ಗೋಕರ್ಣ ಮತ್ತು ಬಸರೂರಿನಲ್ಲಿ ಮಠಗಳನ್ನು ಸ್ಥಾಪಿಸಿ ಭಟ್ಕಳದಲ್ಲಿದ್ದ ಮೂಲಮಠವನ್ನು ವಿಸ್ತರಿಸಿದ್ದರು.

ಆ ಕಾಲದಲ್ಲಿ ತೀರ್ಥಯಾತ್ರೆ ಮುಗಿಸಿ ಬಂದ ಬಳಿಕ ಒಂದು ಸಮಾರಂಭ ಮಾಡಿ ಮಹಾಸಮಾರಾಧನೆ ಮಾಡುವ ಸಂಪ್ರದಾಯವಿತ್ತು. ಉಪಸ್ಥಿತರಿದ್ದ ಜನಸಮೂಹಕ್ಕೆ ಅವರು ತಮ್ಮ ಯಾತ್ರಾನುಭವವನ್ನು ವಿವರಿಸಿ ಉದಾತ್ತಜೀವನ ನಡೆಸುವ ಸಂಕಟಕಾಲದಲ್ಲಿ ಧೈರ್ಯ, ಸಂಯಮಗಳಿಂದ ಎದುರಿಸುವ ಪ್ರತಿಕ್ಷಣ ಮತ್ತು ನಿಯೋಜನಬದ್ಧ ರೀತಿಯಿಂದ ಭವಿಷ್ಯವನ್ನು ರೂಪಿಸುವ ಪ್ರೇರಣೆ ಕೊಡುತ್ತಿದ್ದರು.

ಭೂಮಿಯಲ್ಲಿ ಹೂತುಹೋದ ಬೀಜವು ಭೂಮಿಯ ಪ್ರಷ್ಠ ಭಾಗವನ್ನು ಭೇದಿಸಿ ಅಂಕುರಿಸುತ್ತದೆ. ಈ ಕೋಮಲ ಅಂಕುರದಲ್ಲಿ ಕಠಿನ ಭೂಮಿಯನ್ನು ಭೇದಿಸುವ ಶಕ್ತಿ ಇರುವಂತೆ ಅಂತಃಶಕ್ತಿಯನ್ನು ಮೈಗೂಡಿಸಿಕೊಂಡು ಸಾರಸ್ವತರು ವಿಕಸಿತರಾಗಬೇಕು. ಕೇವಲ ಒಂದೇ ಬೀಜದಿಂದ ಅದು ಮರವಾದ ನಂತರ ಆ ಮರದಿಂದ ಕೋಟ್ಯಾನು ಕೋಟಿ ಫಲನೀಡುವ ಅನೇಕ ಮರಗಳು ಹುಟ್ಟುವವು. ಎಂಬ ಸೂಕ್ತಿಯ ನೆನಪಾಗುತ್ತದೆ (ಏಕಾ ಬೀಜಾ ಪೋಟಿ ತರು ಕೋಟಿ ಕೋಟಿ ಜನ್ಮ ಘೆತೀ ಸುಮನೇ ಫಳೇ.)

ಭೂಮಿ ಪರಮಾತ್ಮನು ಮಾಡಿದ ಶ್ರೇಷ್ಠ ನಿರ್ಮಿತಿ. ದೈವೀಸಂಕಲ್ಪದಂತೆ ನಾವು ಭೂಮಿಯ ಮೇಲೆ ಕಾಲಿಟ್ಟರೂ ಅವಳು ಜೀವಸೃಷ್ಟಿಯ ಜನನಿ ಎಂಬುದನ್ನು ಮರೆಯುವಂತಿಲ್ಲ. ಅವಳು ವಿಷ್ಣುವಿನ ಸತಿಯೂ ಹೌದು. ಹೋದ ಹೋದಲ್ಲಿ ಭೂದೇವಿಯ ಸೇವೆ ಮಾಡಿರಿ ಪ್ರಸನ್ನಳಾದರೆ ವರದಾನ ಸಿಗುತ್ತದೆ ಎಂದು ಬೋಧಿಸುತ್ತಿದ್ದರು. ಕುಲದೇವರು ಹಾಗೂ ಗುರುಸ್ವಾಮಿಗಳಲ್ಲಿ ಅಬಾಧಿತ ನಿಷ್ಠೆಯಿಂದ ನಡೆದುಕೊಳ್ಳುವ ಸಾರಸ್ವತ ಸಮಾಜವು ತಾವು ವಾಸ್ತವ್ಯ ಮಾಡಿದ ಭೂಮಾತೆಗೆ ಅಸೀಮ ನಿಷ್ಠೆ ಅರ್ಪಿಸಿದರು. ಒಂದು ಅರ್ಥದಲ್ಲಿ ಗೋಮಂತಕದಲ್ಲಿ ಕಿತ್ತೊಗೆದ ಸಸಿಗಳು ಗೋವೆಯಿಂದ ದೂರವಿದ್ದ ಭೂಮಿಯಲ್ಲಿ ಬೇರೂರಿದಂತಾಯಿತು.

ಯಾತ್ರೆಗಳ ವರ್ಣನೆ ಮಾಡುವಾಗ ಶ್ರೀ ಜೀವೋತ್ತಮತೀರ್ಥ ಸ್ವಾಮಿಜಿಯವರು ಆಯಾತೀರ್ಥಗಳ ಮಹತ್ವವನ್ನು ತಮ್ಮ ಅನುಭವಗಳನ್ನು ಛಂದೋಬದ್ಧವಾಗಿ ವಿವರಿಸಿದ್ದಾರೆ. ಕಾವ್ಯವು ಅವರ ಮುಖದಿಂದ ಉತ್ಸೂರ್ತವಾಗಿ ಹರಿಯುತ್ತಿತ್ತು. ಆ ಕಾಲದಲ್ಲಿ ಲೇಖನಕಲೆಯ ಪ್ರಗತಿಯಾಗಿರಲಿಲ್ಲ. ಮುದ್ರಣ ಕಲೆಯೂ ಜನ್ಮವೆತ್ತಿರಲಿಲ್ಲ. ಗುರುಸ್ವಾಮಿಯವರು ಮಧುರಕಂಠದಿಂದ ಉಚ್ಚರಿಸಿದ ಕಾವ್ಯ ಪಂಕ್ತಿಗಳನ್ನು ಶ್ರದ್ಧೆಯಿಂದ ಶ್ರವಣ ಮಾಡಿ ಮುಖೋದ್ಗತ ಮಾಡುವ ಪರಿಪಾಠವಿತ್ತು. ಒಂದಾನೊಂದು ಕಾಲದಲ್ಲಿ ಸಾರಸ್ವತ ಮುನಿಗಳ ಆಶ್ರಮದಲ್ಲಿ ವೇದರಕ್ಷಣೆಗಾಗಿ

ಋಚೆಗಳ ಪಠಣ ಮಾಡುತ್ತಿದ್ದರು. ಅವರ ವಂಶಜರು ಶ್ರೀ ಸ್ವಾಮೀಜಿಯವರ ಮುಖ ಕಮಲದಿಂದ ವಿನಿಸ್ಸೃತವಾದ ಅರ್ಥಘನ, ಭಾವಪೂರ್ಣ ಶ್ರದ್ಧಾ ಭಕ್ತಿಯಿಂದ ಛಂದೋಬದ್ಧವಾಗಿ ಇತ್ತೀಚೆಗೂ ಹಾಡುತ್ತಿದ್ದರು. ಕರ್ನಾಟಕದ ವಿವಿಧ ಮಠಗಳ ಭಜನೆಯ ಸಮಯ ತೀರ್ಥಾವಳದೊಳಗಿನ ಹಾಡುಗಳನ್ನು ಹಾಡುತ್ತಿದ್ದರು.

ತೀರ್ಥಾವಳದ ಕಾವ್ಯಪಂಕ್ತಿಗಳು ಪ್ರಪ್ರಥಮ ಯಾವ ಭಾಷೆಯಲ್ಲಿ ರಚಿತವಾಯಿತು ಎಂಬುದು ಚರ್ಚಾಸ್ಪದ ವಿಷಯವಾಯಿತು. ಪರ್ತಗಾಳಿ ಮಠದ ಸಂಗ್ರಹಾಲಯದಲ್ಲಿ ಇತಿಹಾಸ ಸಂಶೋಧಕರಿಗೆ ದೊರೆತ ತೀರ್ಥಾವಳ ಎಂಬ ಹೆಸರಿನ ಹಸ್ತಲಿಖಿತ ಪ್ರತಿಯು ಸಂಪೂರ್ಣವಾಗಿಲ್ಲ. ಅದು ಛಂದೋಬದ್ಧವಾಗಿಯೂ ಇಲ್ಲ. ಕನ್ನಡ ಅಥವಾ ಕೊಂಕಣಿ ಭಾಷೆಯ ಕಾವ್ಯಪಂಕ್ತಿಗಳನ್ನು ಮರಾಠಿ ಭಾಷೆಯಲ್ಲಿ ಅನುವಾದಿಸಿ ಇಟ್ಟಿರಬೇಕು ಎಂದೆನಿಸುತ್ತದೆ.

ತೀರ್ಥಾವಳದ ಉಪಲಬ್ಧ ಪ್ರತಿಯಿಂದ ನಾವು ಸಂಪೂರ್ಣ ಕಾವ್ಯಾಂಜಲಿಯನ್ನು ಪುನಃ ಓವಿಬದ್ಧಗೊಳಿಸಲಾಗಿದೆ. ಮೂಲ ತೀರ್ಥಾವಳದ ಮೂಲ ಆಶಯ, ವಿಷಯ ಮತ್ತು ಭಾವನೆಗಳನ್ನು ಕಾಪಾಡಲಾಗಿದೆ. ಶಬ್ದಯೋಜನೆ ಕೂಡ ಬದಲಾಗಬಾರದೆಂದು ದಕ್ಷತೆ ವಹಿಸಲಾಗಿದೆ. ಇದೊಂದು ಮೂಲ ಕಾವ್ಯದ ರೂಪಾಂತರವಾಗಿದೆ.

## ಶ್ರೀ ಜೀವೋತ್ತಮ ತೀರ್ಥರು ಸಂದರ್ಶಿಸಿದ ತೀರ್ಥಸ್ಥಳಗಳು

### (ತೀರ್ಥಾವಳದಲ್ಲಿ ಉಲ್ಲೇಖಿಸಿದ ತೀರ್ಥಕ್ಷೇತ್ರಗಳ ಸೂಚಿ)

ಸದ್ಯ ಯಾವ ಹೆಸರಿನಿಂದ ಈ ತೀರ್ಥಗಳನ್ನು ಗುರುತಿಸಲಾಗುತ್ತಿದೆಯೊ ಆ ಹೆಸರುಗಳನ್ನು ಆವರಣದಲ್ಲಿ ಕೊಡಲಾಗಿದೆ. ತೀರ್ಥಾಂಕ (ಗೀತಾ ಪ್ರೆಸ್-ಗೋರಖಪುರ)ದಲ್ಲಿರುವ ಆಯಾಯ ತೀರ್ಥಗಳ ಮುಂದೆ ಪುಟಸಂಖ್ಯೆ ಕೊಡಲಾಗಿದೆ.

| | | | |
|---|---|---|---|
| ಪಂಧರಿ (ಪಂಡರಪುರ) | 259 | ಮೃಗಕುಂಡ | 421 |
| ನರಸಿಂಹಪುರಾ | 260 | ಮುಚುಕುಂದ ಗುಂಫಾ (ಗುಹೆ) | 421 |
| ನಿರಭಿವ್ವುರೀತೀರಿ (ನಿರಾ-ಭೀಮಾ ನದಿ) | | ಧವಳಾಪುರ | 421 |
| ಗೋದಾವರಿ | 244 | ದೇವದಾಮೋದರ | 421 |
| ಪಂಚವಟಿ | 245 | ಸೋರಟಿ ಸೋಮನಾಥ | 418 |
| ಬ್ರಹ್ಮಗಿರಿ | 248 | ಪ್ರಭಾಸ | 418 |
| ವೈತರಣೀ (ವಿಂಧ್ಯಾಚಲದಲ್ಲಿ ಉಗಮ) | | ಅಗ್ನಿಕುಂಡ | 418 |
| ಗಂಗಾದ್ವಾರ | 248 | ಬ್ರಹ್ಮಕುಂಡ | 418 |
| ಕುಶಾವತಿ | 247 | ಕಪಿಲಾನದಿ | 418 |

ತಾಪೀ 240
ನರ್ಮದಾ ಗಂಗಾ 224
ಮಹೇಂದ್ರ 228
ದ್ವಾರಕಾ 216
ಗೋಮತಿ 216
ಸ್ವರ್ಗದ್ವಾರ 216
ಚಕ್ರತೀರ್ಥ (ದ್ವಾರಕಾಪುರೀ) 410
ಶಂಕುದ್ವಾರ 413
ಪದ್ಮತೀರ್ಥ 413
ಗೋಪಿಕಾ ಸರೋವರ 413
ಪಿಂಡಾರಕ (ಪಿಂಡತಾರಕ ದ್ವಾರಕಾಪುರಿ) 414
ಚತುರ್ಭುಜ ಕೃಷ್ಣ 411
ಅಗಸ್ತಿಕುಂಡ ಕಾವೇರಿ 411
ರುಕ್ಮಾವತಿ ಗಂಗಾ 411
ದುರ್ವಾಸ ಋಷೀಶ್ವರ 414
ರುಕ್ಮಿಣೀವನ 414
ಕರ್ದಮ ಕುಂಡ 419
ಮಧುಮತಿ 416
ಖೇತಿಕೆ 415
ಭೀಮಕುಂಡ 415
ಸ್ವರ್ಗಗಂಗಾ 421

ನಿಷ್ಕಲಂಕ ತೀರ್ಥ 418
ವಲ್ಲಕತೀರ್ಥ (ಬಾಣತೀರ್ಥ, ಭಾಲಕತೀರ್ಥ) 419
ಹಿರಣ್ಯತೀರ (ದೇಹೋತ್ಸರ್ಗತೀರ್ಥ) 419
ಅಶ್ವಸ್ಥ 418
ಸಂಗಮ (ಕಪಿಲಾ–ಹಿರಣ್ಯಾ–ಸರಸ್ವತಿ ಸಮುದ್ರಕ್ಕೆ ಸೇರಿದ ಸ್ಥಾನ) 418
ಸೂರ್ಯಕುಂಡ 417
ಗುಪ್ತ ಪ್ರಿಯಾಗ 418
ಮ್ಲೇಂಛನಗರ (ಅಹಮದಾಬಾದ್)
ಸಿದ್ಧಪುರ 401
ಬಿಂದು ಸರೋವರ 402
ಕಪಿಲ ಮಹಾಮುನಿ 402
ಗೋಪಾಲ ಗೋಪಿ ರುದನ 398
ಅರ್ಬುದಗಿರಿ 399
ಅಂಕ್ಲೇಶ್ವರ 399
ಮಂದಾಕಿನಿ 399
ಏಕಲಿಂಗ ಮಹೇಶಿ
ಶಾರ್ಙೇಶ್ವರ \ 289
ಪುಷ್ಕರಕ 289
ಯಜ್ಞ ವರಾಹ 290
ರಾಮಹರಿದೆ 86

ಪೃಥೂದಕ (ಸೂರ್ಯಕುಂಡ) 83
ವಶಿಷ್ಠ ಸಾನ್ನಿಧಿ 84
ಕುರುಕ್ಷೇತ್ರ 75, 76 ಮತ್ತು 77
ಭಾನೇಶ್ವರ 1
ಅದಿತಿ ವನ 78
ಇಂದ್ರ ಪ್ರಸ್ಥ 86
ವಾರಣಾವತ 86
ಹಸ್ತಿನಾಪುರ 88
ಮಾಯಾಪುರ 62
ಹರಿದ್ವಾರ 62
ದುರ್ಮಂಡಲ (ದುರ್ಗಾ,ಚಂಡಿ, ಮಾನಸ ಹೀಗೆ ಮೂರು ಮಂದಿರಗಳು) 63, 64
ಸೀತಾ 63, 64
ವಾಲುಕಾ ನಂದಾ 63, 64
ಭದ್ರಾ 63, 64
ಚಕ್ಷು 63, 64

ಪಂಚ ಪ್ರಯಾಗ
(ದೇವ ಪ್ರಯಾಗ, ಭಾಗೀರಥಿ, ಅಲಕನಂದಾ) 49
(ರುದ್ರ ಪ್ರಯಾಗ : ಮಂದಾಕಿನಿ ಅಲಕನಂದಾ) 54
(ನಂದ ಪ್ರಯಾಗ : ನಂದಾ- ಅಲಕನಂದಾ) 55
(ಕೇಶವ ಪ್ರಯಾಗ : ಸರಸ್ವತಿ – ಅಲಕನಂದಾ) 60
(ಕರ್ಣ ಪ್ರಯಾಗ : ಪಿಂಡಾರ-ಅಲಕನಂದಾ) 61
(ವಟ ಪ್ರಯಾಗ : ತ್ರಿವೇಣಿಸಂಗಮ : ಗಂಗಾ, ಯಮುನಾ, ಸರಸ್ವತಿ)
ಶ್ರೀಧರಾವತಿ (ವಸುಧಾರ) 60
ಖಡ್ಗದ್ವಾರ (ಸ್ವರ್ಗದ್ವಾರ) 60
ವಾಲುಕಾನಂದಾ–(ಅಲಕಾನಂದಾ, ಅಲಕಾಪುರೀ) 60
ಬದ್ರಿಕಾಶ್ರಮ 59–60
ಪಾಂಡುಕೇಶ್ವರ 58
ಕಿರಾತವನ 58
ಶ್ರೀಶೈಲ ಪರ್ವತ (ಕೈಲಾಸ ಪರ್ವತ ಶಿಖರ) 40
ಮಾನಸ ಸರೋವರ (ರಾಕ್ಷಸ ತಲಾವ) 39
ಗಂಡಕೀ–ಶಾಲಗ್ರಾಮ ನದಿ, ಅಗ್ನಿಕುಂಡ, ಮುಕ್ತಿಕ್ಷೇತ್ರ,

ನೀಲ ಪರ್ವತ 63, 64
ಮೇರು ಮಸ್ತರೇ 58
ಕುಂಭ ಜಾಂಬುಕ ಹೃಷಿಕೇಶ (ಕುಬ್ಜಾಮೃತೀರ್ಥ) 62
ದೇವ ಪ್ರಯಾಗ
(ಭಾಗೀರಥೀ-ಅಲಕನಂದಾ ಸಂಗಮ) 49
ತಪೋವನ (ತಪ್ತಕುಂಡ) 53
ರಾಮಪದ (ರಘುನಾಥ ಮಂದಿರ) 53
ತ್ರಿಯುಗೀ ನಾರಾಯಣ 55
ಮಂದಾಕಿನಿ 54
ಪಂಚ ಪಾಂಡವ 56
ಕೇದಾರ 56
ಭೀಮಾಗುಂಫಾ(ಭೀಮಶಿಲಾ) 56
ಮಹೇಶಿ 56
ತ್ರಿತಿಕುಂಡಿ 56
ಹಂಸತೀರ್ಥ 58
ಧರ್ಮಶಿಲಾ 55
ಭೀಮಾಚಲ ಪರ್ವತ 56
ಮಂದಾಕಿನಿ 55
ಧವಲಗಂಗಾ (ದೂಧಗಂಗಾ) 52
ಪಂಚಕೇದಾರ 56
ಅರುಣಾಚಲ 352, 353, 354
ಶ್ರೀರಂಗಂ 370, 371, 372
ರಾಮೇಶ್ವರ 374, 378
ಧನುಷ್ಕೋಡಿ 380, 381
ಅಯೋಧ್ಯಾ 142
ದರ್ಶನೇಶ್ವರ 143
ಗೋಮತಿ ತೀರ 144
ಸಂಭತಕ್ಷೇತ್ರ 91
ಮಧುವನ 95
ಬ್ರಾಹ್ಮ ಸಹಿತ ಅಂತರ್ವೈರ 100
ದ್ವಾದಶೀವನ 95
ಗೋವರ್ಧನ 104
ಕಾಲಿಯಾ ದೋಹ
(ಕಾಲಿಯ ಮರ್ದನಸ್ಥಾನ) 103
ಅಕ್ರೂರ ಘಾಟ 104

ದಾಮೋದರ ಕುಂಡ, ಗಂಡಕೀ ನದಿಯ ಸುತ್ತಮುತ್ತಲಿನ
ಪರಿಸರವು ವಿಷ್ಣುಕ್ಷೇತ್ರವೆನಿಸಿಕೊಳ್ಳುತ್ತದೆ. 155
ಪ್ರಯಾಗ, ತ್ರಿವೇಣಿ 115, 116
ವಾರಣಾಸಿ 126
ಬಿಂದುಮಾಧವ 130
ಗಯಾ 161
ವೇದನಾಥ 162
ಗಂಗಾಸಾಗರ, ಸಂಗಮ 181
ನಿಷ್ಕಲಂಕ ತೀರ್ಥ 190
ವೈತರಣಿ 190
ಪುರುಷೋತ್ತಮ ಕ್ಷೇತ್ರ (ಜಗನ್ನಾಥ ಪುರಿ) 197
ಕೃಷ್ಣವೇಣಿ 255,256
ಮಂಗಳಗಿರಿ 338
ಶ್ರೀಕೂರ್ಮ (ಸಿಂಹಾಚಲ) 334
ಗೋದಾವರೀ 337
ಶ್ರೀಶೈಲ ಶಿಖರ (ಮಲ್ಲಿಕಾರ್ಜುನ) 180
ಅಬಳ ನರಸಿಂಹ (ಅಹೋಬಲ ನರಸಿಂಹ) 131, 133
ಪಿತಾಪಾಣೀ (ಪಿತಾಪುರಂ) 335, 336
ವಿಷ್ಣುಕಾಂಚಿ-ಶಿವಕಾಂಚಿ 335, 336
ವರದರಾಜ 357
ಅಹಲ್ಯಾಶಿಲಾ -ಗೌತಮ ಕುಂಡ 153
ಜನಕ ಗಿರಿ 151
ಭಾನುತಟ 144
ಉಜ್ಜಯನಿ, ಶಂಕೇಶ್ವರಿ
(ಅವಂತಿಕಾಪುರ) 240, 250
ಕ್ಷಿಪ್ರಾ 250
ಮಹೇಂದ್ರಗಿರಿ- ಸಪ್ತಕುಲ ಪರ್ವತಗಳಲ್ಲಿ
ಪ್ರಥಮ ಕುಲ ಪರ್ವತ 205
ಪದ್ಮನಾಭ 394
ಜನಾರ್ದನ 395, 396
ಕಿರಾಯದೇಶ (ಕೇರಳ ದೇಶ)
ರಜತ ಪೀಠ (ಉಡುಪಿ ಕ್ಷೇತ್ರ) 367
ಗೋಕರ್ಣ 310
ಅಟಕೇಶ್ವರ
ಪಂಚಗಂಗಾ 261
ಭೀಮಾರಥಿ 259


Dwarakanath Bhavan Hall

